ಕರ್ನಾಟಕ ವಿಧಾನ ಸಭೆ

ಗುರುವಾರ 2ನೇ ಏಪ್ರಿಲ್ 1992

ಸದನವು ವಿಧಾನ ಸೌದದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10.45 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಸ್. ಎಂ. ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು.

ಹಕ್ಕುಚ್ಯುತಿ ನಿರ್ಣಯಕ್ಕೆ ಅನುಮತಿ ಕೋರಿಕೆ

ವಿಷಯ : ಪ್ರಶ್ನೆ ಸಂಖ್ಯೆ 906ರ ಶ್ರೀ ರಾಮಲಿಂಗರೆಡ್ಡಿ ಶಾಸಕರು ರವರ ಪ್ರಶ್ನೆಗೆ
ಉತ್ತರ ನೀಡಿರುವ ಬಗ್ಗೆ ಉದ್ಭವಿಸಿರುವ ಪರಿಸ್ಥಿತಿ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ನಿಯಮಾವಳಿ 191ರ ಪ್ರಕಾರ ಹಕ್ಕುಚ್ಯುತಿಯ ಒಂದು ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ಆ ವಿಚಾರವನ್ನು ಪ್ರಸ್ತಾಪ ಮಾಡಲು ನಿಮ್ಮ ಅನುಮತಿಯನ್ನು ಕೋರುತ್ತಿದ್ದೇನೆ. ಈ ಸದನದಲ್ಲಿ ತಾರೀಖು 31.3.92 ರಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 906 ಶ್ರೀಮಾನ್ ರಾಮಲಿಂಗಾರೆಡ್ಡಿ (ಜಯನಗರ ಕ್ಷೇತ್ರ) ಶಾಸಕರು ಕಳುಹಿಸಿದ ಪ್ರಶ್ನೆಗೆ ರಾಜ್ಯ ಸರ್ಕಾರದ ಕಾನೂನು ಇಲಾಖೆಯವರು ಕೊಟ್ಟಿರತಕ್ಕ ಉತ್ತರ.....

ಶ್ರೀ ಎಂ. ವೀರಪ್ಪಮೊಯ್ಲಿ : ಅಧ್ಯಕ್ಷರೇ ಇದು High Court administration comes under DPAR.

ಶ್ರೀ ಬಿ. ಚಂದ್ರೇಗೌಡ :– ಇದು ಕಾನೂನು ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ. ಉತ್ತರಕ್ಕೆ ಸಹಿ ಯಾರು ಹಾಕಿದ್ದಾರೆ?

SRI. M. Veerappa Moily :- On behalf of the Chief Minister, I have replied. ಉಚ್ಚನ್ಯಾಯಾಲಯದ ಆಡಳಿತ ಸನ್ಮಾನ್ಯ ಮುಖ್ಯಮಂತ್ರಿಗಳವರ ಖಾತೆಯಲ್ಲಿ ಬರುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ:– ಹಾಗಿದ್ದರೆ ನನ್ನ ಸೂಚನೆಯಲ್ಲಿ ಸ್ವಲ್ಪ ಬದಲಾವಣೆ ಮಾಡುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ಮಾಹಿತಿಯನ್ನು ಬದಗಿಸಿದ್ದು ಲಾ ಮಿನಿಸ್ಟ್ರಿ ಎಂದು ಭಾವನೆ ಮಾಡಿದ್ದೇನೆ. ಆದರೆ ನನಗೆ ಉತ್ತರ ತಕ್ಷಣ ದೊರೆಯದ್ದರಿಂದ, ಪ್ರತಿ ಸಿಕ್ಕದೇ ಇದ್ದುದರಿಂದ ಹೀಗಾಗಿದೆ. ಇದನ್ನು ಮುಖ್ಯಮಂತ್ರಿಗಳು ಎಂದು ಬದಲಾವಣೆ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಇದು ಒಂದು ಬಹಳ ಮಹತ್ವವಾದಂತಹ ಮತ್ತು ಅರ್ಥಪೂರ್ಣ ಚರ್ಚೆಗೆ ಅವಕಾಶ ಇರತಕ್ಕ ಒಂದು ಪ್ರಶ್ನೆ. ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ತನ್ನ ತನ್ನ ಇತಿಮಿತಿ, ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕು ಎನ್ನುವ ನಿಬಂಧನೆಗಳು ಇದ್ದರೂ ಕೂಡ ನಾವು ಬ್ರಿಟಿಷ್ ಪಾರ್ಲಿಮೆಂಟರೀ ಸಿಸ್ಟಮ್‌ನ್ನು ಸ್ವಲ್ಪ ಹೆಚ್ಚು ಕಡಿಮೆ lock, stock and barrel, we follow the same set of practice and procedure. Though it is compartmentalised, the three wings of the domocratic institutions should go together.

ಈ ದೃಷ್ಟಿಯಿಂದ ಇತ್ತೀಚಿನ ಬೆಳವಣಿಗೆಗಳು ಶಾಸಕಾಂಗಕ್ಕೂ ಮತ್ತು ನ್ಯಾಯಾಂಗಕ್ಕೂ ಅನೇಕ ಘರ್ಷಣೆಗಳನ್ನು ತರತಕ್ಕ ವಿನಾಕಾರಣವಾದಂತಹ ಮತ್ತು ಉದ್ದೇಶ ಇದೆಯೋ ಇಲ್ಲವೋ. . . ಉದ್ದೇಶ ಇದ್ದಹಾಗೆ ಕಾಣತಕ್ಕ ಪ್ರವೃತ್ತಿ ಬೆಳೆಯುತ್ತಾ ಇದೆ. ಸಾಧ್ಯವಾದಷ್ಟು ಮಟ್ಟಿಗೆ ಇದನ್ನು ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕು. ಅದೂ ವಿಶೇಷವಾಗಿ ತಾವು ಈ ಸದನದ ಅಧ್ಯಕ್ಷರಾಗಿರತಕ್ಕ ಸಮಯದಲ್ಲಿ ಸಂಸದೀಯ ವ್ಯವಹಾರದಲ್ಲಿ ನುರಿತಂತಹವರು ಮಾತ್ರ ಅಲ್ಲ,

ಅನುಭವಿಗಳಾಗಿದ್ದೀರಿ. ಆದುದರಿಂದ ನಿಮ್ಮ ಮಾರ್ಗದರ್ಶನವನ್ನು ಪಡೆಯಬೇಕೆನ್ನುವ ಸದಿಚ್ಛೆಯಿಂದಲೇ ನಾನು ಈ ಹಕ್ಕುಚ್ಯುತಿ ಸೂಚನಾ ಪತ್ರವನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. 191ನೇ ನಿಯಮದ ಆದಿಯಲ್ಲಿ ನಾನು ಸೂಚನಾಪತ್ರ ಕೊಟ್ಟಿದ್ದೇನೆ. ನನಗೆ ಈ ಪ್ರಶ್ನೆಯನ್ನು ಎತ್ತಲು ಅವಕಾಶ ಕೊಡಬೇಕೆಂದು ಹೇಳಿ ನಿಯಮ 190ರ ಮೇರೆಗೆ ತಮ್ಮಲ್ಲಿ ಅನುಮತಿಯನ್ನು ಕೇಳುತ್ತಿದ್ದೇನೆ. ವಸ್ತುಸ್ಥಿತಿ ಏನೆಂದರೆ 31.3.92ಕ್ಕೆ ಸದವದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಸಂಸದೀಯ ವ್ಯವಹಾರಗಳ ಮಂತ್ರಿಗಳು ಉತ್ತರವನ್ನು ಕೊಡತಕ್ಕ ಕಾಲದಲ್ಲಿ ಶ್ರೀ ರಾಮಲಿಂಗರೆಡ್ಡಿಯವರು ಕಳುಹಿಸಿದ್ದ ಚುಕ್ಕೆ ಗುರುತಿನ 906ನೇ ಪ್ರಶ್ನೆ ಆ ದಿವಸ ಈ ಸದನದಲ್ಲಿ ಬಂದಿತ್ತು. ಆ ಪ್ರಶ್ನೆ ಈ ರೀತಿ ಇದೆ. "ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಡಿಸೆಂಬರ್ 1991ರ ಅಂತ್ಯದವರೆಗೆ ಎಷ್ಟು ಪ್ರಕರಣಗಳು ಬಾಕಿ ಇರುತ್ತವೆ? ಜನವರಿ 1991ರಿಂದ ಡಿಸೆಂಬರ್ 91ರ ಅಂತ್ಯದವರೆಗೆ ಎಷ್ಟು ಪ್ರಕರಣಗಳು ವಿಲೇವಾರಿ ಆಗಿರುತ್ತವೆ?" ಇದಕ್ಕೆ ಉತ್ತರ ಹೀಗಿದೆ. "ಉಚ್ಛ ನ್ಯಾಯಾಲಯವು ರಾಜ್ಯ ವಿಧಾನಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ಈ ಪ್ರಶ್ನೆಯನ್ನು ಉತ್ತರಿಸಲು ಸಾಧ್ಯವಿಲ್ಲ". ಈ ಪ್ರಶ್ನೆ ಮತ್ತು ಉತ್ತರದಿಂದ ಉದ್ಭವಿಸಿರತಕ್ಕ ಅನೇಕ ಬಿಡಿಸಲಾರದಂತಹ ಒಂದು ಗಂಟನ್ನು ನಾವು ಏನು ಹಾಕುತ್ತಾ ಹೋಗುತ್ತಿದ್ದೇವೆ. ಈ ರೀತಿ ಶ್ರೀ ರಾಮಲಿಂಗರೆಡ್ಡಿಯವರು ಕಳುಹಿಸಿದ ಪ್ರಶ್ನೆಗೆ ಉಚ್ಛನ್ಯಾಯಾಲಯದಿಂದ ಇತ್ತರ ಬಂದಿತ್ತೇ? ನಾವು ಪ್ರಶ್ನೆ ಕಳುಹಿಸಿದ ತಕ್ಷಣ ಇದು ಯಾವ ಇಲಾಖೆಗೆ ಹೋಯಿತು ಎನ್ನುವ ಪ್ರಶ್ನೆ ಇದೆ. ಡಿಪಿಆರ್‌ಗೆ ಹೋಯಿತೇ ಅಥವಾ ಕಾನೂನು ವಿಭಾಗಕ್ಕೆ ಹೋಯಿತೇ? ಇದನ್ನು ಮುಖ್ಯಕಾರ್ಯದರ್ಶಿಯವರು ಈ ಪ್ರಶ್ನೆ 906ನ್ನು ಹೈಕೋರ್ಟಿಗೆ ರೆಫರ್ ಮಾಡಿದ್ದಾರೋ ಅಥವಾ ಇಲ್ಲವೋ? ಮೂಲಭೂತವಾಗಿ ಸರ್ಕಾರ ಉತ್ತರ ಕೊಡಬೇಕಾದ ಪ್ರಶ್ನೆ. ಇದು 906ನೇ ಪ್ರಶ್ನೆ ಉಚ್ಛನ್ಯಾಯಾಲಯಕ್ಕೆ ಹೋಗದೇ ಇದ್ರೆ ಉತ್ತರ ಯಾವ ಪ್ರಶ್ನೆಗೆ ಬಂತು? ಬಹಳ ಜಟಿಲವಾಗಿ ಬಿಡಿಸಲಾರದ ಸಮಸ್ಯೆಯಾಗಿ ನನ್ನ ಮನಸ್ಸಿನಲ್ಲಿ ಉಳಿದಿರತಕ್ಕದ್ದು. ಪ್ರಶ್ನೆ 906ಕ್ಕೆ ಇದು ಉತ್ತರ ಅಲ್ಲದೇ ಇದ್ರೆ ಆ ಉತ್ತರವನ್ನು ಸದನದಲ್ಲಿ ಇಟ್ಟು ಸದನದಲ್ಲಿರತಕ್ಕ ಸದಸ್ಯರಿಗೆ ಉಚ್ಛನ್ಯಾಯಾಲಯ ಈ ಸದನಕ್ಕೆ ಏನೋ ಅಪಚಾರ ಮಾಡಿದೆ ಎನ್ನುವಂತಹ ಅಭಿಪ್ರಾಯ ಇಟ್ಟುಕೊಂಡು ನಾವು ಅಭಿವ್ಯಕ್ತ ಮಾಡಿದಂತ ಭಾವನೆಗಳು, ಈಗ ನನಗನ್ನಿಸುತ್ತದೆ, ಏನೋ ಒಂದು ಮಹಾ ಅಪರಾಧವನ್ನು ಮಾಡಿದೆವೇನೋ ನಾವು, ಉಚ್ಛನ್ಯಾಯಾಲಯದ ಒಳಗೆ ಆ ಒಂದು ಭಾವನಾತ್ಮಕವಾದ ಸಂದರ್ಭದಲ್ಲಿ ಏನಾದರೂ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದರೆ ಅದು ಅಪಚಾರ ಆಯಿತೋ ಏನೋ ಎಂದು ನನ್ನ ಮನಸ್ಸಿನಲ್ಲಿ ಇದೆಯೆನ್ನಿಸುತ್ತದೆ. ಆದರೆ ಆ ಭಾವನೆಗಳನ್ನು ಕೆರಳಿಸಿದವರು ಸರ್ಕಾರ. ಆ ಭಾವನೆಯ ಕೆರಳಿಕೆಗೆ ಕಾರಣ ಈ ಪ್ರಶ್ನೆಗೆ ಬಂದಂಥ ಉತ್ತರ. ಆ ಕಾರಣ ಇದು. ಹಾಗಿದ್ದರೆ ಇವರ ಪರಿಹಾರ ಎಲ್ಲಿ ಆಗಬೇಕು

I would try to quote the Deccan Herald dated 2-4-1992. The Registrar of the High Court has explained.

"The State Government did not refere. . ."

This is the fundamental question to be asked and to be replied by the Government.

"The State Government did not refer to the High Court before replying to the question tabled in the Assembly on Tuesday by Mr Ramalinga Reddy on the cases pending in the Court, according to the Court Registrar Mr. S. Venkataraman."

If the Court Registrar could go on record to the effect that this question No. 906 of Mr. Ramalinga Reddy was not at all *referred* to the High Court and the High Court did not reply to the question, then, who replied and

what prompted this Government to reply differently without even asking the High Court to that effect.
ಇದು ಬಹಳ ಮುಖ್ಯವಾಗಿರತಕ್ಕ ಪ್ರಶ್ನೆ. ಆದ್ದರಿಂದ ತಮ್ಮಲ್ಲಿ ನಾನು ಇದನ್ನು ಪ್ರಸ್ತಾಪ ಮಾಡುವುದಕ್ಕೆ ಮುನ್ನ ಹೈಕೋರ್ಟಿನವರಿಗೆ ಈ ರೀತಿಯಾಗಿ ಸದನಕ್ಕೆ ಉತ್ತರ ಕೊಡಬಾರದು ಎನ್ನತಕ್ಕ ಇಚ್ಛೆ ಇರಲಿಲ್ಲ. ಹಾಗೆ ಇಚ್ಛೆ ಇದ್ದಿದ್ದರೆ ಇಂತಹ ಮಾಹಿತಿಯನ್ನು ಸಂಸತ್ತಿಗೆ ಕೊಟ್ಟಿದ್ದಾರೆ. ಮಂಡ್ಯ ಲೋಕಸಭಾ ಕ್ಷೇತ್ರದ ಸದಸ್ಯರಾದ ಮಾನ್ಯ ಜಿ. ಮಾದೇಗೌಡರ ಪ್ರಶ್ನೆಗೆ ಕಳುಹಿಸಿರುವಂತಹ ಉತ್ತರದ ಆಧಾರದ ಮೇಲೆ ನನಗೆ ಬಂದಿರುವ ಮಾಹಿತಿ ಪ್ರಕಾರ ಈ ಪ್ರಶ್ನೆಗೆ ಉತ್ತರ ಬಂದಿದೆ. Again I quote Deccan Herald :

"As on December 31, 1991 a total of 99,067 cases were pending in the Karnataka high Court, Minister of State of law and Justice and Company Affairs, Mr. P.R. Kumaramangalam said to-day."

In this very session, the High Court of Karnataka has supplied all the materials to be replied before the Lok Sabha and there was no reason arose as I could see that they refused to reply the same question to the Assembly.
ಹೀಗಾಗಿ ಉಚ್ಚನ್ಯಾಯಾಲಯ ಕೊಡುವುದಕ್ಕೆ ಶಕ್ಯವಿಲ್ಲವೆಂದು ರಾಜ್ಯಸರ್ಕಾರ ಈ ಸದನಕ್ಕೆ ಇಂತಹ ತಪ್ಪು ಮಾಹಿತಿಯನ್ನು ಕೊಟ್ಟು ಉಚ್ಚನ್ಯಾಯಾಲಯದವರು ಕೊಡದಿರತಕ್ಕ ಉತ್ತರವನ್ನು ಈ ಸದನಕ್ಕೆ ಕೊಟ್ಟು ಈ ಸದನವನ್ನು ತಪ್ಪು ದಾರಿಗೆ ಎಳೆದಿದ್ದಾರೆ. ಆದ್ದರಿಂದ ಈವೊಂದು ಉತ್ತರವನ್ನು ಕೊಟ್ಟ ಜವಾಬ್ದಾರಿಯನ್ನು ಹೊತ್ತ ಮಾನ್ಯ ಮುಖ್ಯಮಂತ್ರಿಗಳು ಈ ಸದನವನ್ನು ಹೀಗೆ ತಪ್ಪು ದಾರಿಗೆ ಎಳೆದಿರುವ ಕಾರಣ ಇದು ಹಕ್ಕುಚ್ಯುತಿಗೆ ಬರುತ್ತದೆ. ಈ ಸದನದ ಚ್ಯುತಿ ಮಾಡಿದ್ದಾರೆಂದು ನನ್ನ ಪ್ರಾರಂಭಿಕ ಅನಿಸಿಕೆ. ಆದಕ್ಕಾಗಿ ತಾವು ಈ ವಿಚಾರವನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸುವುದಕ್ಕೆ ಸರ್ವ ಯೋಗ್ಯವಾಗಿರತಕ್ಕ ವಿಚಾರ. ಮೊದಲನೆಯ ಕಾರಣ, ಯಾವ ಪ್ರಶ್ನೆಗೆ ನಾವು ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ ಆ ಪ್ರಶ್ನೆಗೆ ಉತ್ತರವನ್ನು ಕೊಡದೆ, ಉತ್ತರ ಬಾರದಿರತಕ್ಕ ವಿಷಯವನ್ನು ಸದನಕ್ಕೆ ಕೊಟ್ಟು ಸದನವನ್ನು ತಪ್ಪು ದಾರಿಗೆ ಎಳೆದಿರತಕ್ಕದ್ದು ಒಂದು. ಮುಖ್ಯವಾಗಿ ಶಾಸಕಾಂಗ ಮತ್ತು ನ್ಯಾಯಾಂಗಕ್ಕೆ ತೀವ್ರತರವಾಗಿ ಸಂಘರ್ಷಣೆಯನ್ನು ತರತಕ್ಕ ಪ್ರಯತ್ನ ಮಾಡಿರತಕ್ಕದ್ದು ಮತ್ತೊಂದು ತಪ್ಪು. ನನಗೆ ಗೊತ್ತಿಲ್ಲ ಸರ್ಕಾರಕ್ಕೂ ಮತ್ತು ಉಚ್ಚ ನ್ಯಾಯಾಲಯಕ್ಕೂ ಇರತಕ್ಕ ಸಂಬಂಧ. ಹಿಂದೆ ಸಂಬಂಧ ಚೆನ್ನಾಗಿದ್ದಿರಬಹುದು ಆಗ ಈ ಉತ್ತರ ಬಂದಾಗ. ಇಲ್ಲಿ ಪ್ರಶ್ನೆ ಬಂದಾಗ ಉತ್ತರ ಕೊಡುವುದಕ್ಕೆ ಇಚ್ಛೆಯನ್ನು ವ್ಯಕ್ತ ಮಾಡದಿರಬಹುದು. ಹಿಂದೆ ಮಾನ್ಯ ರಾಜೂಗೌಡರ ಪ್ರಶ್ನೆ ಇತ್ತು. ಆ ಪ್ರಶ್ನೆಗೆ ಇದೇ ಉತ್ತರ ಇದ್ದರೂ ಇರಬಹುದೆಂದು ಊಹೆ. ಅಥವಾ ಇದ್ದರೂ ಇರಬಹುದು. ಈಗ ಸಂಬಂಧ ಕೆಟ್ಟಿರಬಹುದು. ಆದ್ದರಿಂದ ಆ ಉತ್ತರವನ್ನು ಇಲ್ಲಿ ಬಳಕೆ ಮಾಡುವುದಕ್ಕೂ ಪ್ರಯತ್ನ ಮಾಡಬಹುದು. ಇಂತಹ ಪ್ರವೃತ್ತಿಯನ್ನು ನಾವು ಪಕ್ಷಾತೀತವಾಗಿ ನೋಡಬೇಕು. ಈ ಪ್ರವೃತ್ತಿಯನ್ನು ಹತ್ತಿಕ್ಕುವಷ್ಟು ದಿಸೆಯಲ್ಲಿ ಅವಕಾಶ ಸಿಕ್ಕಾಗ ಅದನ್ನು ಹತ್ತಿಕ್ಕತಕ್ಕ ಪ್ರಯತ್ನ ಮಾಡಬೇಕು. ನ್ಯಾಯಾಂಗ ಮತ್ತು ಶಾಸಕಾಂಗಕ್ಕೆ ಬರತಕ್ಕ ಈ ಸಂಘರ್ಷಕ್ಕೆ ತೆರೆ ಎಳೆಯತಕ್ಕ ಕೆಲಸವನ್ನು ತಮ್ಮ ಕಾಲದಲ್ಲಿ ಅದು ಆಗಲಿಕೆ ಸಾಧ್ಯವಿದೆ ಎನ್ನತಕ್ಕ ನನ್ನ ಪೂರ್ಣ ವಿಶ್ವಾಸ ಮತ್ತು ನಂಬಿಕೆ. ಆ ಕಾರಣಕ್ಕಾಗಿ ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಈ ಪ್ರಸಂಗವನ್ನು ಸದನದ ಹಕ್ಕುಚ್ಯುತಿ ಸಮಿತಿಗೆ ನೇರವಾಗಿ ತಾವು ಕಳುಹಿಸಿ ಕೊಡಬೇಕು. ಅಲ್ಲಿ ವಿವರವಾದ ಮಾಹಿತಿಯನ್ನು ಸಂಗ್ರಹಿಸಿ ನೀವು ಅದಕ್ಕೆ ಪರಿಹಾರವನ್ನು ಕಂಡುಹಿಡಿಯಬೇಕು. ಜೊತೆಗೆ ಇಂತಹ ಭಾವನಾತ್ಮಕ ಸಂಬಂಧದ ಪ್ರಶ್ನೆಯನ್ನು ಇಲ್ಲಿ ತಂದಾಗ ನಾವು ಉಚ್ಚ ನ್ಯಾಯಾಲಯಕ್ಕೆ ಸ್ವಲ್ಪಮಟ್ಟಿಗೆ ಬೇಸರ ತರತಕ್ಕ ಪ್ರಸ್ತಾಪವನ್ನು ಇಲ್ಲಿ ಮಾಡಿದ್ದರೆ ನಾನು ಯಾವ ರಿಸರ್ವೇಶನ್ ಇಲ್ಲದೆ ಉಚ್ಚ ನ್ಯಾಯಾಲಯದ ಕ್ಷಮೆಯಾಚನೆ ಮಾಡುತ್ತೇನೆ. ಅದಕ್ಕಾಗಿ ನಾನು ಹಿಂದುಮುಂದು

ನೋಡುವುದಿಲ್ಲ. ಆದಕ್ಕೆ ಅವಕಾಶ ಕೊಟ್ಟ ಸರ್ಕಾರವನ್ನು ಮಾತ್ರ ತಾವು ತರಾಟೆಗೆ ತೆಗೆದುಕೊಳ್ಳಬೇಕು ಮತ್ತು ಇದಕ್ಕೆ ಪರಿಹಾರವನ್ನು ಕಂಡುಹಿಡಿಯಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : (ಹಿರಿಯೂರು) ಮಾನ್ಯ ಅಧ್ಯಕ್ಷರೆ ಮಾನ್ಯ ವಿರೋಧಪಕ್ಷದ ನಾಯಕರು ಏನು ಪ್ರಸ್ತಾಪ ಮಾಡಿದ್ದಾರೆ ಆ ವಿಚಾರವನ್ನು ಈ ದಿವಸ ಬೇರೆ ರೂಪದಲ್ಲಿ ನಾನು ಪ್ರಸ್ತಾಪ ಮಾಡಬೇಕೆಂದು ಇದ್ದೆ. ಸಭೆ ಪ್ರಾರಂಭ ಮಾಡುವುದಕ್ಕೆ ಮುಂಚೆ ಹಾಗೆಂದು ಮನಸ್ಸು ಮಾಡಿಕೊಂಡಿದ್ದೆ. ಇವತ್ತಿನ ಡೆಕನ್‌ಹೆರಾಲ್ಡ್ ಪತ್ರಿಕೆಯಲ್ಲಿ ಆ ಪತ್ರಿಕೆಯ ಒಂದು ನ್ಯೂಸ್ ಐಟಂನಲ್ಲಿದ್ದ ಒಂದು ನ್ಯೂಸ್ ಐಟಂ ಇದೆ. ಮೊನ್ನೆ ನಮ್ಮ ಸಭೆಯಲ್ಲಿ ಬಂದಂತಹ ಪ್ರಶ್ನೆಗೆ ಉತ್ತರ ಏನುಬಂದಿದೆ ಆ ಉತ್ತರದ ಹಿನ್ನೆಲೆಯಲ್ಲಿ ನಾವೆಲ್ಲ ಬಾವುಕರಾಗಿ ಮತ್ತು ನಮ್ಮ ಹಕ್ಕಿನ ಬಗ್ಗೆ ಪ್ರತಿಪಾದನೆಯನ್ನು ಹೆಚ್ಚಾಗಿ ಪ್ರಸ್ತಾಪ ಮಾಡಿದ್ದೇವೆ. ಇವತ್ತಿನ ಕನ್ನಡಪ್ರಭದ ಸಂಪಾದಕೀಯದಲ್ಲಿ ಬಂದಿದೆ. ಅದನ್ನು ತಾವು ಗಮನಿಸಿದ್ದಿರೋ ಏನೋ ಗೊತ್ತಿಲ್ಲ. "ಮಾಹಿತಿ ಪಡೆಯುವ ಅಧಿಕಾರ ಹೇಗೆಂದು ಹೇಳಿ ವಿಧಾನಸಭೆ ಜನ ಪ್ರತಿನಿಧಿಗಳ ಸಭೆ, ಆಡಳಿತ ಶಾಸನಗಳಿಗೆ ಸಂಬಂಧಿಸಿದಂತೆ ವಿಧಾನ ಸಭೆಗೆ ಪರಮಾಧಿಕಾರ'' ಹೀಗೆ ಅಂತ ಸಂಪಾದಕೀಯದಲ್ಲಿ ಕೂಡ ಬರೆದಿದ್ದಾರೆ. ಈ ಹಿನ್ನೆಲೆಯೊಳಗೆ, ನಾನು ಸಭೆ ಸೇರುವುದಕ್ಕಿಂತ ಮುಂಚೆ ವಿಷಯವನ್ನು ಪ್ರಸ್ತಾಪ ಮಾಡಬೇಕು. ಸರ್ಕಾರದ ಒಂದು ಅಚಾತುರ್ಯದಿಂದ ಅದು ಮಂತ್ರಿಗಳಿಂದ ಆಗಿರಬಹುದು, ಅಧಿಕಾರಿಗಳಿಂದ ಆಗಿರಬಹುದು, ಮತ್ತೆ ಯಾರಿಂದಲಾದರೂ ಆಗಿರಬಹುದು. ಅವರ ಅಚಾತುರ್ಯದಿಂದ ಇಲ್ಲಿ ಪ್ರಸ್ತಾಪಿಸಲ್ಪಟ್ಟಂಥ ವಿಷಯ ಸ್ವಲ್ಪ ಭಾವುಕರಾಗಿ ನಾವು ಪ್ರಸ್ತಾಪ ಮಾಡಿ, ಪ್ರಜಾಪ್ರಭುತ್ವದಲ್ಲಿ ಯಾವ ಅಂಗಗಳಿಗೆ ಮಹತ್ವ ಇದೆ, ಪ್ರಜಾಪ್ರತಿನಿಧಿ ಸಭೆ ಕಾರ್ಯಾಂಗ, ನ್ಯಾಯಾಂಗ ಮತ್ತೆ ಪತ್ರಿಕೆಗಳು ಈ 4 ಕಂಬಗಳೇನಿವೆ, ಈ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯತಕ್ಕ ಕಂಬಗಳು, ಇದಕ್ಕೆ ನಾವು ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ನಮ್ಮಂಥ ನಾನೂ ಕೂಡ ವಿರೋಧಪಕ್ಷದ ನಾಯಕರು ಪ್ರತಿಕ್ರಿಯೆ ಮಾಡಿದಂಥವನು. ಮಾನ್ಯ ಬೇರೆ ಸದಸ್ಯರೂ ಕೂಡ ಪ್ರತಿಕ್ರಿಯಿಸಿದರು. ಹಾಗಾಗಿ ಸರ್ಕಾರದಿಂದ ಮಾನ್ಯಪಾರ್ಲಿಮೆಂಟರಿ ಅಫೈರ್ಸ್ ಮಂತ್ರಿಗಳು ಒಂದು ಪತ್ರವನ್ನು ಕೂಡ ಓದಿದರು. ತದನಂತರ, ಆ ದಿವಸದ ಕೊನೆಯ ಭಾಗದಲ್ಲಿ, ನಮ್ಮ ರೆಸುಲ್ಯೂಷನ್ ಏನು ಬಂದಿತ್ತು, ಮಾನ್ಯ ಮುಖ್ಯಮಂತ್ರಿಗಳಿಂದ ಮಂಡಿಸಲ್ಪಟ್ಟ ನಿರ್ಣಯ, ಇಲ್ಲಿ ಇನ್ನೊಂದು ಕರ್ನಾಟಕದಲ್ಲಿ ಉಚ್ಚ ನ್ಯಾಯಾಲಯದ ಒಂದು ಭಾಗ ಏರ್ಪಾಡಾಗಬೇಕೆಂದು ಬಂದಾಗ ಅದಕ್ಕೆ ಉತ್ತರವಾಗಿ ಮುಖ್ಯಮಂತ್ರಿಗಳು ತಾವೇ ಪ್ರಸ್ತಾಪ ಮಾಡಿದರು. ಅದು ರೆಕಾರ್ಡ್ಸ್‌ನಲ್ಲಿ ಹೋಗಿದೆ. ನನಗೆ ನೆನಪಿನಿಂದ ಹೇಳುತ್ತಿದ್ದೇನೆ. I have not been able to lay my hands on the proceedings.

ಅವರು ಹೇಳಿದ್ದಾರೆ. ನಾನೇ ಇದಕ್ಕೆ ಉತ್ತರವನ್ನು ಸಭೆಗೆ ಕೊಡುವುದಕ್ಕೆ ಸಹಾಯ ಮಾಡಿದೆ ಎನ್ನುವ ಮಾತನ್ನು ಅಂದಿದ್ದಾರೆ. May not be in the same words, ಆದರೆ, ಆ ರೀತಿಯಲ್ಲಿ ಅರ್ಥ ಬರುವ ರೀತಿ ಮುಖ್ಯಮಂತ್ರಿಗಳು ಅಂದರು. ನನಗೂ ಕೂಡ ಸಂತೋಷ ಆಯಿತು. ಏಕೆಂದರೆ, ಈ ಸಭೆಯ ಹಕ್ಕನ್ನು ಎತ್ತಿಹಿಡಿಯುವುದರಲ್ಲಿ ಮುಖ್ಯಮಂತ್ರಿಗಳು ದೊಡ್ಡ ಕೆಲಸ ಮಾಡಿದರು ಹಾಗೆ ಎಂದು ನಾನು ಅಂದುಕೊಂಡೆ. ಆದರೆ, ಇವತ್ತು ನಾವು ಪತ್ರಿಕೆಯಲ್ಲಿ ನೋಡಿದಾಗ, ಆದರಲ್ಲೂ ಕೂಡ ಮೊದಲನೇ ವಾಕ್ಯವನ್ನೇ ನೋಡಿದಾಗ, ಮನಸ್ಸಿಗೆ ತುಂಬಾ ಬೇಸರವಾಯಿತು.

"The State Government did not refer to the High Court before replying to the question tabled in the Assembly by Mr. Ramalinga Reddy on the cases pending in the High Court, according to Court Registrar Mr. Venkataraman."

ಹಾಗೆ ಎಂದು ಹೇಳಿದ್ದಾರೆ. ಇದನ್ನು ವರದಿ ಮಾಡಿರತಕ್ಕಂಥವನು ಎನ್.ಸಿ.ಗುಂಡೂರಾವ್ ಎನ್ನತಕ್ಕಂಥವರು ವರದಿ ಮಾಡಿದ್ದಾರೆ. ಆದಕ್ಕೆ ಈ ಮಾತಿಗೆ ಪೂರ್ಣ ಹೊಣೆಯನ್ನು ಅವರು ತೆಗೆದುಕೊಂಡಿದ್ದಾರೆ. ಇದು, ಇವತ್ತು ಬಹಳ ಪ್ರಮುಖವಾಗಿರತಕ್ಕಂಥ ಪ್ರಶ್ನೆ. ಅದರಲ್ಲೂ ಕೂಡ ತಾವು ಅಧ್ಯಕ್ಷರಾಗಿರುವಾಗ, ಮೊನ್ನೆ ತಾವು ಆ ಸ್ಥಾನದಲ್ಲಿ ಇರಲಿಲ್ಲ. ಆದರೂ ಕೂಡ ತಮ್ಮ ಕಾಲದಲ್ಲಿ

ನಡೆಯುತಕ್ಕಂಥ ಈ ಸಭೆಯಲ್ಲಿ ನಾವು ಇವತ್ತು ಈ ಸಭೆಯ ಯಾವ ಸದಸ್ಯರೂ ಕೂಡ ಆ ಪಕ್ಷದವರೇ ಆಗಲೀ, ನಾವೇ ಆಗಲಿ ನಮ್ಮ ಹೋರಾಟ, ನ್ಯಾಯಾಲಯದ ಜೊತೆಗೆ ಇಲ್ಲವೇ ಇಲ್ಲ. ಅಂತಹ ಪರಿಸ್ಥಿತಿ ಬಂದಾಗ, ಇತಿಮಿತಿಯಲ್ಲಿ, ಎಷ್ಟು ನಾವು ಯಾವ ಗೆರೆಯಲ್ಲಿ ಇರಬೇಕು ಎಂಬುದನ್ನು ವಿಚಾರ ಮಾಡಿ, ಪ್ರಸ್ತಾಪ ಮಾಡತಕ್ಕಂಥ ಪರಿಪಾಠ ಈ ಸಭೆಯಲ್ಲಿ ಬಹಳ ಕಾಲದಿಂದ ನಡೆದು ಬಂದಿದೆ, ಅದನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. ಇವತ್ತು ಈ ದೃಷ್ಟಿ ಇರುವಾಗ ಮಂತ್ರಿಗಳು ಆ ಪತ್ರವನ್ನು ಓದಿದರು. ಓದುವಾಗ, ತಾರೀಖನ್ನು ಹೇಳಲಿಲ್ಲ. ಸರ್ಕಾರದವರು, ಮಂತ್ರಿಗಳು ಓದುತ್ತಾರೆಂದು ಹೇಳಿದರೆ, ಅಥೆಂಟಿಸಿಟಿ ಬಗ್ಗೆ ನಾವು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದು ಸರಿಯೇ ತಪ್ಪೇ ಎನ್ನುವುದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅದು ಸರಿಯಾದದ್ದೇ ಎಂದು ನಾವು ಅಂದುಕೊಳ್ಳುತ್ತೇವೆ. ಈಗ ಕೂಡ ಈ ಪ್ರಶ್ನೆ ಮಾಡುವಾಗ ಮಂತ್ರಿಗಳು ಹೇಳುತ್ತಿದ್ದರು. ಇದ ಲಾ ಮಿನಿಸ್ಟರಿಗೆ ಸಂಬಂಧಪಟ್ಟದ್ದಲ್ಲ. ಮುಖ್ಯಮಂತ್ರಿಗಳ ಖಾತೆಗೆ ಸಂಬಂಧಪಟ್ಟಿದ್ದು ಎನ್ನುವ ಮಾತನ್ನು ಕೂಡ ಹೇಳಿದರು. ಇರಲಿ ಯಾರೇ ಆದರೂ, ಲಾ ಮಿನಿಷ್ಟರ್ ಖಾತೆಗೆ ಸಂಬಂಧಪಟ್ಟಿದ್ದರೆ, ಪ್ರಶ್ನೆ ಹೋದಾಗ, Law Secretary takes up the matter and on behalf of the Law Sacretary, the under Secretary will take up the matter with the department concerned. If it is the question pertaining to the Chief Minister, the Chief Secretary or other Ministers who have been authorised by him will take up the matter. ಆದ್ದರಿಂದ, ಅದು ಅಂತಹ ಹೆಚ್ಚಿನ ಮಹತ್ವದ ಪ್ರಶ್ನೆ ಅಲ್ಲ. ಇವತ್ತು ಪ್ರಶ್ನೆ ಏನು, ಇಲ್ಲಿ ಏನು ವರದಿಯಾಗಿದೆ. ಅದನ್ನು ಗಮನಿಸಬೇಕು. ಇದು ಹಿಂದೆ ಪಿ.ಸಿ ಜೈನ್ ಎನ್ನತಕ್ಕಂಥ ಮುಖ್ಯ ನ್ಯಾಯಾಧೀಶರು, 6–7 ತಿಂಗಳ ಹಿಂದೆ, ಅವರು ಅಲ್ಲಿ ತಮ್ಮ ಸಭೆಯಲ್ಲಿ, ನ್ಯಾಯಾಧೀಶರ ಪೂರ್ಣ ಜಡ್ಜಗಳ ಸಭೆ ಏನಿರುತ್ತದೆ, ಆ ಸಭೆಯಲ್ಲಿ ಒಂದು ತೀರ್ಮಾನ ತೆಗೆದುಕೊಂಡಿದ್ದರಂತೆ. ಅದು ಯಾವ ದೃಷ್ಟಿಯಿಂದ ತೆಗೆದುಕೊಂಡಿದ್ದರೋ,, ಏತಕ್ಕೆ ಸಂಬಂಧಪಟ್ಟದ್ದಕ್ಕೆ ತೆಗೆದುಕೊಂಡಿದ್ದರೋ, ಯಾವ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ತೆಗೆದುಕೊಂಡಿದ್ದರೋ ಅದರ ಹಿನ್ನೆಲೆ ನಮಗೆ ಗೊತ್ತಿಲ್ಲ. ಇವತ್ತು ಪತ್ರಿಕೆಯಲ್ಲಿ ವರದಿಯಾಗಿರುವ ಪ್ರಕಾರ, ಸರ್ಕಾರ ಒಬ್ಬ ಸದಸ್ಯರು ಕಳುಹಿಸಿದ ಪ್ರಶ್ನೆಯನ್ನು ಸಂಬಂಧಪಟ್ಟವರಿಗೆ ಕಳುಹಿಸದೇ, ತಾವೇ ನೇರವಾಗಿ ಇಲ್ಲಿ ಬಂದು, ಮಂತ್ರಿಗಳ ಮುಖಾಂತರ ಈ ಸಭೆಗೆ, ಏಕೆಂದರೆ,ಅಧಿಕಾರಿಗಳು ಇಲ್ಲಿ ಮಾತನಾಡುವ ಹಾಗಿಲ್ಲ. ಇವತ್ತಿನ ದಿವಸ ಆ ಹಕ್ಕು ಅವರಿಗೆ ಇಲ್ಲ. ಸರ್ಕಾರದ ಮಂತ್ರಿಗಳ ಮುಖಾಂತರ, ನ್ಯಾಯಾಂಗ ಹೀಗೆ ಹೇಳಿದೆ ಎಂದು ಹೇಳಿ, ಅವರ ಮಾತನ್ನು ಮಂತ್ರಿಗಳ ಬಾಯಲ್ಲಿ ಹೇಳಿಸಿ, ಈ ಸಭೆ ಯಾವುದೇ ಕಾರಣ ಇಲ್ಲದೆ, ಭಾವುಕರಾಗಿ, ನಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡತಕ್ಕಂಥ ರೀತಿಯಲ್ಲಿ ಮಾಡಿದ್ದು ದೊಡ್ಡ ಅಪರಾಧ. ಇವತ್ತು ಪ್ರಶ್ನೆ ಏನೆಂದು ಹೇಳಿದರೆ ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಪ್ರಿವಿಲೇಜ್ ಮೋಷನ್‌ಗೆ ಕಳುಹಿಸಬೇಕೆಂದು ಮಾಡಿದ್ದಾರೆ. ಅದಕ್ಕೆ ಪೂರ್ವಭಾವಿಯಾಗಿ ನಾವು ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ, ನಾನು ಹೇಳುವಾಗ ಹೇಳಿದೆ, ಈ ಸದನದ 224 ಸದಸ್ಯರೂ ಕೂಡಾ ಈ ಪ್ರಜಾಪ್ರಭುತ್ವಕ್ಕೆ ಅಡಿಗಲ್ಲಾಗಿರತಕ್ಕ ನ್ಯಾಯಾಂಗ, ಕಾರ್ಯಾಂಗ, ಈ ಸಭೆ ಮತ್ತು ಪತ್ರಿಕೆಗಳು, ಇದಕ್ಕೆ ಸಂಬಂಧಪಟ್ಟಂತೆ ಅವು ಸರಿಯಾಗಿ ಬೆಳೆದು ಪ್ರಜಾಪ್ರಭುತ್ವ ವ್ಯವಸ್ಥಿತವಾಗಿ ಸುಭದ್ರವಾಗಿ ಬೆಳೆಯಬೇಕೆಂದು ನಮ್ಮ ಅಭಿಪ್ರಾಯ ಇಲ್ಲ. ಹೀಗಿರುವಾಗ ತಮ್ಮ ಕಾಲದಲ್ಲಿ ಇದಕ್ಕೆ ಸಹಾಯಕವಾಗುವ ರೀತಿಯಲ್ಲಿ ನಾವು ಸಂಪ್ರದಾಯಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ನಾವೆಲ್ಲರೂ ಕೂಡಾ ಈ ಭಾಗ ಆ ಭಾಗ ಎಂಬುದನ್ನು ಮರೆತು ನಮ್ಮ ಹಕ್ಕುಗಳನ್ನು ಅಸರ್ಟ್ ಮಾಡಿಕೊಳ್ಳುವುದಕ್ಕಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ, ನಮಗೆ ಆ ವಿಷಯದ ಹಿನ್ನೆಲೆ ಗೊತ್ತಿಲ್ಲದೇ ಇದನ್ನು ಮಾಡಿದ್ದು ಎಂದು ನ್ಯಾಯಾಂಗದ ಮನಸ್ಸಿಗೆ ಹೋಗಬೇಕಾಗುತ್ತದೆ. ಅದು ನಮ್ಮ ಹಕ್ಕಿನಲ್ಲಿ ಪ್ರವೇಶ ಮಾಡಿದಾಗ, ನಾವು ಅದಕ್ಕೆ ಪ್ರತಿಕ್ರಿಯಿಸತಕ್ಕದ್ದು ನಮ್ಮ ಹಕ್ಕು ಎಂದು ಹೇಳಬೇಕಾಗುತ್ತದೆ, ಆ ದೃಷ್ಟಿಯಿಂದ ಇವತ್ತು ಏನಾಗಿದೆ ಇದರಲ್ಲಿ ಹೇಳಿದ್ದಾರೆ. ಪತ್ರಿಕೆಯಲ್ಲಿ

ವರದಿಯಾಗಿ, ಅವರು ಹೊಣೆಯನ್ನು ಹೊತ್ತಿದ್ದಾರೆ, ಅವರು ಹೆಸರು ಹಾಕಿಕೊಂಡಿದ್ದಾರೆ, ಎಸ್.ಸಿ. ಗುಂಡೂರಾವ್ ಎಂದು. ಇದು ಪಿ.ಸಿ. ಜೈನ್ ಅವರು ಚೀಫ್ ಜಸ್ಟೀಸ್ ಆಗಿದ್ದ ಕಾಲದಲ್ಲಿ ಆಗಿದ್ದು ಎಂದು ಈ ಪ್ರಶ್ನೆಯನ್ನು ಸರಕಾರ ಕಳುಹಿಸಿಲ್ಲ ಎಂದು ಹೇಳುವುದಾದರೆ ಯಾವ ಆಧಾರದ ಮೇಲೆ ಈ ಸಭೆಗೆ ಸರಕಾರ ಉತ್ತರವನ್ನು ಕೊಟ್ಟಿದೆ? ಇದು ಏನಾಗಿದೆ ಸ್ವಾಮಿ ಎಂದರೆ, ಈ ಸದನದ ಸದಸ್ಯರು ಮತ್ತು ನಮ್ಮ ಹಕ್ಕನ್ನು ಅಧಿಕಾರಿಗಳು ಬಹಳ ಹಗುರವಾಗಿ ತೆಗೆದುಕೊಂಡಿದ್ದಾರೆ, ಇವತ್ತಿನ ದಿವಸ ಏನು ಬೇಕಾದರೆ ನಾವು ತರಿಸಬಹುದು, ಈ ಸಭೆಯ ಮುಂದೆ ಏನು ಬೇಕಾದರೂ ಇಡಬಹುದು, ಮಂತ್ರಿಗಳ ಮುಖಾಂತರ ಹೇಳಿಕೆ ಮಾಡಿಸಬಹುದು ಎಂಬ ಮಾತನ್ನು ಹೇಳಿದ್ದಾರೆ, ಸಪ್ಲಿಮೆಂಟರಿ ಬಂದಾಗ ಹೇಳಿದ್ದೆ, ಮಂತ್ರಿಗಳು ಈ ಪ್ರಶ್ನೆಯನ್ನು ಅಪ್ರೂವ್ ಮಾಡುವಾಗ ಇದು ಅವರ ನೋಟೀಸ್‌ಗೆ ಬರುತ್ತದೆ. ಸಂಬಂಧಪಟ್ಟ ಮಂತ್ರಿಗಳು ಇದರ ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ. ಚೀಫ್ ಮಿನಿಸ್ಟರ್‌ರವರೇ ಇದನ್ನು ಅಪ್ರೂವ್ ಮಾಡಿರಲಿ, ಅವರು ಅಪ್ರೂವ್ ಮಾಡುವಾಗ ಇದಕ್ಕೆ ಸಂಬಂಧಪಟ್ಟಂತೆ ನೋಡಬೇಕಾಗಿತ್ತು, ಕಾಗದ ಬಂದಿದೆಯೇ? ಯಾವತ್ತು ಬಂದಿದೆ? ಏನು ಹೇಳಿದ್ದಾರೆ ಒಂದಲ್ಲ ನಾಲ್ಕು ಸಲ ಕಣ್ಣಿನಲ್ಲಿ ನೋಡಿ ಪ್ರಶ್ನೆಯನ್ನು ಅಪ್ರೂವ್ ಮಾಡಿ ಕಳುಹಿಸಬೇಕಾಗಿತ್ತು. ಇದರಲ್ಲಿ ಏನು ಹೇಳುತ್ತಾರೆ, 6--7 ತಿಂಗಳ ಹಿಂದೆ ತೆಗೆದುಕೊಂಡಿದ್ದು ತದ ನಂತರ ಬಂದ ಮುಖ್ಯ ನ್ಯಾಯಾಧೀಶರು ಅದನ್ನು ಹಾಗೇ ಬಿಟ್ಟುಕೊಂಡು ಬಂದಿರಬಹುದು, ಯಾವ ಕಾರಣಕ್ಕೋ ಏನೋ, ಈಗಿರತಕ್ಕಂಥ ಮುಖ್ಯ ನ್ಯಾಯಾಧೀಶರ ಗಮನಕ್ಕೆ ಬಂದಿದ್ದ ಪಕ್ಷದಲ್ಲಿ ಅವರು ಏನು ಅಭಿಪ್ರಾಯ ತೆಗೆದುಕೊಳ್ಳುತ್ತಿದ್ದರು ಎಂದು ಹೇಳುವುದಕ್ಕೆ ಬರುವುದಿಲ್ಲ. I don't think he would have taken that stand. He might have revised his opinion. ಯಾವ ಹಿನ್ನೆಲೆಯಲ್ಲಿ ಹಿಂದೆ ತೆಗೆದುಕೊಂಡ ತೀರ್ಮಾನ ಇದೆಯೋ ಗೊತ್ತಿಲ್ಲ. ಇಂತಹ ಪ್ರಶ್ನೆಗಳಿಗೋಸ್ಕರ ತೆಗೆದುಕೊಂಡಿದ್ದರೇ, ಆ ಮಾತು ಬೇರೆ, ಯಾವುದೋ ಬೇರೆ ಕಾರಣಗಳಿಗೆ ತೆಗೆದುಕೊಂಡಿದ್ದರೇ ಆ ಮಾತು ಬೇರೆ, ಇವತ್ತು ಇಲ್ಲಿ ಏನು ಉಲ್ಲೇಖ ಆಯಿತು ಎಂದರೆ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ರವರು 229 ಎಂಟ್ರಿ ನಂಬರ್ 78 ಎಂದು ಏನೋ ಹೇಳಿದರು, ಷೆಡ್ಯೂಲ್ 78 ಅದರ ಪ್ರಕಾರ ಎಂಬ ಮಾತನ್ನು ಹೇಳಿದರು, ನನ್ನ ಪ್ರಶ್ನೆ ಏನೆಂದರೆ ಯಾವ ಹಿನ್ನೆಲೆಯಲ್ಲಿ ತೆಗೆದುಕೊಂಡಿದ್ದರೋ ನನಗೆ ಗೊತ್ತಿಲ್ಲ, ಇವತ್ತು ನಾವು ವಿಚಾರ ಗೊತ್ತಿಲ್ಲದೆ ನಾವು ನಮ್ಮ ಅಭಿಪ್ರಾಯವನ್ನು ಬಹಳ ಪ್ರಸ್ತಾಪ ಮಾಡಿ ನಾವು ನಮಗೂ ನ್ಯಾಯಾಂಗಕ್ಕೂ ಏನೋ ವ್ಯಾಜ್ಯ ಇದೆ ಎನ್ನುವ ರೀತಿಯಲ್ಲಿ ನಾವು ನಮ್ಮ ಅಭಿಪ್ರಾಯ ನೋಡಿದವರಿಗೆ, ಓದಿದವರಿಗೆ, ಕಾಣತಕ್ಕಂಥ ರೀತಿಯಲ್ಲಿ ಉಂಟಾಗಿದೆ. ಆದುದರಿಂದ ಮಂತ್ರಿಗಳು ಇವತ್ತು ಸ್ಪಷ್ಟವಾಗಿ ಹೇಳಬೇಕು, ಇಲ್ಲಿ ಏನು ಉಲ್ಲೇಖ ಮಾಡಿದರು ಆ ಕಾಗದ ರಿಜಿಸ್ಟ್ರಾರ್‌ರವರಿಂದ ಬಂದಿರತಕ್ಕಂಥದ್ದು, ಅದು ಯಾವ ತಾರೀಖಿನದು, ಯಾವುದಕ್ಕೆ ಸಂಬಂಧಪಟ್ಟಂಥಾದ್ದು ಈ ಪ್ರಶ್ನೆ ಸಂಬಂಧಪಟ್ಟ ಪ್ರಶ್ನೆಯನ್ನು ಅಲ್ಲಿಗೆ ಕಳುಹಿಸಿದ್ದರೆ ಅದಕ್ಕೆ ಏನು ಉತ್ತರ ಬಂದಿದೆ ಮುಖ್ಯಮಂತ್ರಿಗಳು ಅದನ್ನು ನೋಡಿದ್ದರೆ ? ಮಾನ್ಯ ಮುಖ್ಯಮಂತ್ರಿಗಳು ತಾವೇ ಸ್ವತಃ ಈ ಸಭೆಯ ಮುಂದೆ ಇಡಬೇಕೆಂದು ಇಡಿಸಿದ್ದೇನೆ ಎಂಬ ಮಾತನ್ನು ಆಡಿದ್ದಾರೆ, ಅದು ರೆಕಾರ್ಡ್‌ನಲ್ಲಿ ಹೋಗಿದೆ, ಅದನ್ನೂ ಕೂಡಾ ತಾವು ತರಿಸಿ ನೋಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಿ ನಾವು ತಪ್ಪು ಮಾಡಿದ್ದರೆ, ಈ ಸಭೆಯಲ್ಲಿ ಪ್ರಾಮಾಣಿಕವಾಗಿ ಆ ತಪ್ಪನ್ನು ನಾವು ತಪ್ಪು ಎಂದು ಹೇಳಿ, ನಾವು ನ್ಯಾಯಾಂಗಕ್ಕೆ ಇದು ಸರಿಯಲ್ಲ ಎಂದು ಕ್ಷಮಾಪಣೆ ಕೇಳತಕ್ಕದ್ದು ನಾವು ಸಾಧಾರಣವಾಗಿ ಮಾಡಬೇಕಾಗುತ್ತದೆ. ಅದು ಇಲ್ಲದೆ ಹೋದರೆ ನಾವು ನಮ್ಮ ಹಕ್ಕನ್ನು ಪ್ರತಿಪಾದನೆ ಮಾಡಿಕೊಳ್ಳುವುದರಲ್ಲಿ ನಾವು ನಮ್ಮ ದಿಟ್ಟ ನಿಲುವನ್ನು ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳ ಮಾತು ಬಹಳ ಪ್ರಾಮುಖ್ಯ ಇಲ್ಲಿ. ನಾನು ಇದನ್ನು ಇರಿಸಿದ್ದೇನೆ ಎನ್ನುವಾಗ ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಅಪ್ರೂವಲ್ ಕೊಟ್ಟಿದ್ದಾರೆ. ಈ ಉತ್ತರಕ್ಕೆ ಒಂದು ವಿಚಾರ ಸ್ವಾಮಿ. ತಮ್ಮ ಮುಂದೆ ನಾನು ಪ್ರಸ್ತಾಪ ಮಾಡುವುದೇನೆಂದರೆ ಇದನ್ನು ಒಂದು ಪಕ್ಷದ ದೃಷ್ಟಿಯಿಂದ ನೋಡಬೇಕಾದ್ದು ಅಲ್ಲ. ಇವತ್ತು ಕಾರ್ಯಾಂಗ ಶಾಸಕಾಂಗ ಮತ್ತು ನ್ಯಾಯಾಂಗಕ್ಕೂ ಏನೋ ಒಂದು ಹೋರಾಟ ಇದೆ ಎನ್ನುವ ರೀತಿಯಲ್ಲಿ ನಾವು ನಡೆದುಕೊಂಡಿದ್ದೇವೆ.

ಇವತ್ತಿನದಿವಸ ಅದಕ್ಕೆ ಯಾರು ಬುದ್ಧಿಪೂರ್ವಕವಾಗಿ ತಪ್ಪು ಮಾಡಿದ್ದಾರೆ ಏತಕ್ಕೆ ತಪ್ಪು ಮಾಡಿದ್ದಾರೆ ಅಂತ ಹೇಳಿ ಅವರಿಗೆ ಶಿಕ್ಷೆ ಮಾಡತಕ್ಕಂಥ ಪರಿಸ್ಥಿತಿ ಒದಗಿ ಬಂದಿದೆ. ಈ ಹಿನ್ನೆಲೆಯಲ್ಲಿ ತಾವು ಇದನ್ನು ನೋಡಬೇಕು. ಹಾಗೆ ಅಂತ ಹೇಳಿ ನಾನು ಈ ಸಭೆ ಸೇರುವುದಕ್ಕಿಂತ ಮುಂಚಿತವಾಗಿ ಪ್ರಸ್ತಾಪ ಮಾಡಬೇಕು ಅಂತ ಇದ್ದೆ. ಆದರೆ ಮಾನ್ಯ ವಿರೋಧಪಕ್ಷದ ನಾಯಕರು ನನ್ನ ಕೆಲಸವನ್ನು ಸ್ವಲ್ಪ ಸುಲಭ ಮಾಡಿದ್ದಾರೆ. ವಿರೋಧಪಕ್ಷದ ನಾಯಕರು ಬರೀ ಪ್ರಿವಿಲೇಜ್‌ಗೆ ಹೊರಟುಬಿಟ್ಟರು. ಆಗ ಇದು ಏನಾಗಿದೆ wave-lenght ಏನಿದೆ ಈ ವಿಚಾರ ಪತ್ರಿಕೆಗಳಲ್ಲಿ ನೋಡಿದ ತಕ್ಷಣ ವಿಚಾರ ಮಾಡತಕ್ಕಂಥಾದ್ದು, ಅದಕ್ಕೆ ಅವರು ಏನು ಒಂದು ಪ್ರಯತ್ನ ಪಟ್ಟಿದ್ದಾರೆ ಅದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಏಕೆಂದರೆ ಇದು ಸೂಕ್ಷ್ಮವಾದಂತಹ ವಿಚಾರಗಳು. ಇವುಗಳನ್ನು ನಾವು ಹಾಗೆಯೇ ಹೋದರೆ ನಾವು ದೊಡ್ಡ ಅಪರಾಧ ಮಾಡಿದಂತಾಗುತ್ತದೆ. ನಾವು ಸತ್ಸಂಪ್ರದಾಯ ಹಾಕುವುದರಲ್ಲಿ ವಿಫಲರಾದಂತೆ ಆಗುತ್ತವೆ. ಆ ದೃಷ್ಟಿಯಿಂದ ತಾವು ನೋಡಬೇಕು ಮತ್ತೆ ವರದಿ ಮಾಡಿದ್ದಾರೆ. . . .

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೇ ನಾನು ಪ್ರಿವಿಲೇಜ್ ತರುವುದಕ್ಕೆ ಏತ- ಪ್ರಯತ್ನಮಾಡಿದೆ ಅಂದರೆ ಇವತ್ತಿನದಿನ ಈ ವರದಿಯೇ ನನಗೆ ಆಧಾರ. I will quote the last paragraph:

"The sources, however, declined to comment whether the minister who had furnished reply to the Assembly without the question being referred to the court had committed breach of privilege."

ಶ್ರೀ ಕೆ.ಎಚ್. ರಂಗನಾಥ್:— ಪಾಪ ಅವರು ಮುಂದೆ ನಾವು ಏನಾದರೂ ಸಿಕ್ಕಿಹಾಕಿಕೊಳ್ಳಬಹುದು ಅಂತ ಹುಷಾರಿನಿಂದ ಹೇಳಿದ್ದಾರೆ ಅಷ್ಟೇ. ನಮಗೆ ನಮ್ಮ ಮುಂದೆ ಬಂದಂತಹ ಪ್ರಶ್ನೆ ನಮ್ಮ ಪ್ರಶ್ನೆಗೆ ಸಪ್ಲಿಮೆಂಟರಿಗೆ ಮಂತ್ರಿಗಳು ಪಾಪ ಅವರಲ್ಲಿ ದಾಖಲೆಗಳು ಏನಿದ್ದವು ಅದನ್ನು ಓದಿದ್ದಾರೆ. The Hon'ble Minister was kind enough to read the whole letter that day, but he did mention the date on which the letter was written.

ಆದ್ದರಿಂದ ಇದರಲ್ಲಿ ಮುಂದೆ ಹೇಳುತ್ತಾರೆ. ಏತಕೋಸ್ಕರ ನಾವು ಸುಮ್ಮನೆ ಇದ್ದೆವು ಅಂತ ರೀಜನ್ಸ್ ಕೊಡ ತಾವು ನೋಡಿರಬಹುದು ಎಂದು ಕಾಣಿಸುತ್ತದೆ.

"Reasons: The sources said that it would be difficult to ascertain the particular reason for which the then Chief Justice might have taken such a decision. The sources presumed that the decision might have been taken out of the fear that supplementaries pertaining to the backlog might lead to a discussion on the conduct of judges while they sat on the Bench though there is a constitutional bar on such a debate."

ಹಾಗೆ ಅಂತ ಒಂದು ಊಹೆ ಮಾಡಿ ಪ್ರಸ್ತಾಪ ಮಾಡಿದ್ದಾರೆ. ನಾನಾ ಕಾರಣಗಳಿಂದ ಏಕೆಂದರೆ ಇದನ್ನು ಬಹಳ ಹಿಂದೆ ತೆಗೆದುಕೊಂಡಿದ್ದ ಆ ತೀರ್ಮಾನ ಯಾವ ಹಿನ್ನೆಲೆಯಲ್ಲಿ ತೆಗೆದುಕೊಂಡರು ಯಾವ ಕಾರಣಕ್ಕೆ ತೆಗೆದುಕೊಂಡರು. ಅದೇನು ನಮಗೆ ಗೊತ್ತಿಲ್ಲ ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಏಕೆಂದರೆ ನೇರವಾದ ಪ್ರಶ್ನೆ. ಮಾನ್ಯಮಂತ್ರಿಗಳು ಇದು ನೇರವಾಗಿ ಪ್ರಿವಿಲೇಜ್‌ಗೆ ಹೋಗಲಿ ಅಂತ ಹೇಳುತ್ತಾರೋ ಏನೋ ಗೊತ್ತಿಲ್ಲ. ಅಥವಾ ಅವರೇನಾದರೂ ಇದನ್ನು ವಿಶದೀಕರಿಸಿ ಸ್ಪಷ್ಟೀಕರಣ ಕೊಡುವುದಾದರೆ ಈ ಪ್ರಶ್ನೆಯನ್ನು ಯಾವಾಗ ಕಳುಹಿಸಿದರು? ಯಾರು ಕಳುಹಿಸಿದರು? ಯಾವ ಇಲಾಖೆಯಿಂದ ಕಳುಹಿಸಿದರು? ಉತ್ತರ ಯಾವಾಗ ಬಂತು? ಏನಂತ ಉತ್ತರ ಬಂತು? ಅಪ್ರೂವಲ್ ಯಾರು ಮಾಡಿದರು? ಮುಖ್ಯಮಂತ್ರಿಗಳು ಅಪ್ರೂವ್ ಮಾಡುವಾಗ ಇದನ್ನು ನೋಡಿ ಮಾಡಿದ್ದಾದರೂ ಹೇಗೆ? ಇದೆಲ್ಲವೂ ಪರಿಶೀಲನೆಗೆ ಬರಬೇಕಾಗುತ್ತದೆ. ಬಂದು ನಾವು ನೋಡಿದ ಮೇಲೆ ಉದ್ದೇಶ ಏನು? ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡುವಾಗ ಹೇಳಿದ್ದಾರೆ. ನಾನು ಇದನ್ನು ನೋಡಿ

ನಮ್ಮ ಹಕ್ಕನ್ನು ಅಸೆಟ್ ಮಾಡಿಕೊಳ್ಳುವುದಕ್ಕಾಗಿ ನಾನೇ ಸಭೆಯ ಮುಂದೆ ಇಡಿ ಉತ್ತರವನ್ನು ಎನ್ನುವ ಮಾತು ಹೇಳಿದ್ದಾರೆ. ಈ ಸಭೆಯ ಹಕ್ಕಿಗೆ ನಮ್ಮ ಹಕ್ಕಿಗೆ ಚ್ಯುತಿ ಬರುವುದಾದರೆ ಯಾರೂ ಕೂಡ ಹಿಂದೆ ಮುಂದೆ ನೋಡಬೇಕಾಗಿಲ್ಲ. ಆ ದೃಷ್ಟಿಯಿಂದ ಆ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದ್ದು ಈ ಪ್ರಶ್ನೆಯನ್ನು ನಾವು ಕಳುಹಿಸಿಲ್ಲ ಉತ್ತರ ಒಂದಲ್ಲ ಆದಾಗ್ಯೂ ಕೂಡ ಯಾವುದೊಂದು ಹೇಳಿದ್ದಾರೆ ಅದು ಗೊತ್ತಿದ್ದು ಮಾಡಿದ್ದರೆ ಅದು ದೊಡ್ಡ ತಪ್ಪಾಗುತ್ತದೆ. ಅದು ಈ ಮನೆಗೆ ಮಾಡಿದಂತಹ ತಪ್ಪಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ತಾವು ಇದನ್ನು ನೋಡಬೇಕು. ಅದರ ಬಗ್ಗೆ ಮಾಹಿತಿಯನ್ನು ಒದಗಿಸುವುದಕ್ಕೆ ತಾವು ಮಾನ್ಯ ಮಂತ್ರಿಗಳಿಗೆ ಆದೇಶ ಕೊಡಬೇಕು ಅಂತ ಹೇಳಿ ನಾನು ವಿಚಾರ ಮಾಡಿದ್ದೇನೆ. ನಾನು ಇದನ್ನು ಪ್ರಸ್ತಾಪ ಮಾಡುವಾಗ ಅವರು ಪ್ರಿವಿಲೇಜ್ ಮೋಷನ್‌ಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿದೆ, ಅದು ಬರುತ್ತದ ಆದರೂ ಕೂಡ ಇದನ್ನು ನಾನು ಪೂರ್ವಭಾವಿಯಾಗಿ ಪ್ರಸ್ತಾಪ ಮಾಡಬೇಕೆಂದು ಇದ್ದೆ ನೋಡಿದ ತಕ್ಷಣವೇ ತಾವು ಇದನ್ನು ತಂದಿದ್ದು ಉತ್ತಮವಾಗಿದೆ. ಸ್ವಾಮಿ ಇದರ ಬಗ್ಗೆ ಹೇಳಬೇಕೆಂದೇ ತಮ್ಮ ಮತ್ತು ನಮ್ಮ ಈ ಮನೆಯ ಯಾರಿಗೂ ಕೂಡಾ ಯಾವುದೇ ದೃಷ್ಟಿಯಿಂದ ಯಾರನ್ನೇ ಸಿಕ್ಕಿಸಿ ಹಾಕಿ ಅದರ ಮೇಲೆ ಆಪಾದನೆ ಮಾಡುವುದಕ್ಕಾಗಿ ಪ್ರಯತ್ನಪಟ್ಟಿದ್ದೇವೆ ಎನ್ನತಕ್ಕಂಥ ಲವಲೇಷವೂ ಕೂಡಾ ಎಲ್ಲೂ ಬರಕೂಡದು. ನ್ಯಾಯಾಂಗದಲ್ಲಿರತಕ್ಕಂಥ ಅಲ್ಲಿ ಏನು ಜಡ್ಜ್ ಆಗಿ ಯಾವ ಹೆದರಿಕೆ ಇಲ್ಲದ ಕೆಲಸ ಮಾಡುತ್ತಿದ್ದಾರೆ. ಅವರಿಗೂ ಬರಕೂಡದು. ನಮಗೂ ಬರಕೂಡದು. ಈ ಮಧ್ಯ ರಾಜ್ಯದಲ್ಲಿರತಕ್ಕಂಥ ಜನತೆ, ಇಲ್ಲಾ ಈ ಸಭೆಯಲ್ಲಿ ಕೆಲಸ ಮಾಡತಕ್ಕಂಥ ನಮ್ಮ ಪ್ರತಿನಿಧಿಗಳು ಎಲ್ಲಾ ವಿಚಾರಗಳನ್ನು ಯಾವ ಪೂರ್ವಗ್ರಹಪೀಡಿತ ಒಂದು ಮನಸ್ಸಿನಿಂದ ನೋಡದೆ ಅದರ ವಾಸ್ತವತೆಯನ್ನು ಅರಿತುಕೊಂಡು ಪ್ರಸ್ತಾಪ ಮಾಡುತ್ತಾರೆ, ಸತ್‌ಸಂಪ್ರದಾಯವನ್ನು ಹಾಕುವುದರಲ್ಲಿ ಹಿಂದೆ ಮುಂದೆ ನೋಡುವುದಿಲ್ಲ ಎನ್ನುವ ಅಭಿಪ್ರಾಯ ಕೂಡಾ ಜನತೆಯಲ್ಲಿ ಬರಬೇಕಾಗುತ್ತದೆ. ಈ ದೃಷ್ಟಿಯಿಂದ ಇದಕ್ಕೆ ಮಹತ್ವವನ್ನು ತಾವು ಕೊಡಬೇಕು ಹಾಗೆ ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : (ವೇಮಗಲ್) ಮಾನ್ಯ ಅಧ್ಯಕ್ಷರೇ, ಮೊನ್ನೆ ದಿವಸ ಮಾನ್ಯ ಸಂಸದೀಯ ಮಂತ್ರಿಗಳು ಇಲ್ಲಿ ಒಂದು ಪತ್ರವನ್ನು ಓದಿದರು. ಅದರಲ್ಲಿ ಒಂದು ಮುಖ್ಯವಾದಂಥ ಪದ ಏನಿತ್ತು "No information could be furnished to the Legislature"–ಎನ್ನತಕ್ಕಂಥ ಪದವನ್ನು ಓದಿದರು. ಈಗ ನಾನು ಕಾನೂನಿನ ಪದವೀಧರನೂ ಅಲ್ಲ, ಕಾನೂನಿನ ಹೆಚ್ಚಿನ ಜ್ಞಾನ ಕೂಡ ಇರತಕ್ಕಂಥವನಲ್ಲ. ಒಬ್ಬ ಸಾಮಾನ್ಯ ಮನುಷ್ಯ. ನನಗೆ ತತ್‌ಕ್ಷಣ ಹೊಳೆದಿದ್ದು ಏನೆಂದರೆ ಈ ಸದನದಲ್ಲಿ ನಾವು ಈ ನ್ಯಾಯಾಲಯಗಳು, ಪ್ರತಿಯೊಂದು ನ್ಯಾಯಾಲಯಗಳು ನಡೆಯುವುದಕ್ಕೆ ಅವರಿಗೆ ಸಂಬಳ – ಸಾರಿಗೆ ಮತ್ತೊಂದಕ್ಕೂ ಕೂಡ ನಾವು ಇಲ್ಲಿ ಮಂಜೂರು ಮಾಡುತ್ತೇವೆ. ನಮ್ಮ ಬಜೆಟ್‌ನಲ್ಲಿ ಸೇರಿಸಿರುತ್ತೇವೆ. ಮಂಜೂರು ಮಾಡುತ್ತೇವೆ. ನನಗೆ ಆ ಹಣ ಯಾವ ರೀತಿ ಖರ್ಚಾಗುತ್ತದೆ, ಏನು ಎನ್ನತಕ್ಕಂಥದ್ದು ಜನತೆ ತಿಳಿದುಕೊಳ್ಳಬೇಕು, ಮತ್ತು ನಾವು ಕೂಡಾ ಈ ಸದನ ಕೂಡಾ ತಿಳಿದುಕೊಳ್ಳಬೇಕಾಗುತ್ತದೆ. ಆ ಹಕ್ಕು ಕೂಡಾ ಇದೆ ಎಂದು ನಾನು ಒಬ್ಬ ಸಾಮಾನ್ಯ ಮನುಷ್ಯನಾಗಿ ನನ್ನ ನಂಬಿಕೆಗೆ ಬಂದಿರತಕ್ಕಂಥದ್ದು. ಅದನ್ನು ಅನುಸರಿಸಿ ನಾನು ಏನು ಹೇಳಿದೆ, ಅವರು "no information could be furnished" ಎಂದು ಅವರು ಹೇಳುವುದಾದರೆ "no paisa could be given to them as salary or anything"ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು : ಅವರು ಅದನ್ನೂ ಕ್ಲಾರಿಫೈ ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ : ಹೌದು. ಅದನ್ನು ಓದಿದ. ಅದನ್ನು ಕಾನ್‌ಸ್ಟಿಟ್ಯೂಷನ್‌ನಲ್ಲಿ ಅದು ಕನ್‌ಸಾಲಿಡೇಟೆಡ್ ಫಂಡ್ ಆಫ್ ಇಂಡಿಯಾದಿಂದ ಅವರು ಮಾಡುತ್ತಾರೆ. ಅದಕ್ಕೆ ತಮ್ಮದು ಅಧ್ಯಕಷರು ಮತ್ತು ಎಲ್ಲರನ್ನೂ ಕೂಡಾ ಕೇಳಿದ್ದಾರೆ. ನಾನು ಮೊದಲೇ ಹೇಳಿದ್ದೇನೆ, ನಾನು ಕಾನೂನಿನ ಪದವೀಧರನೂ ಅಲ್ಲ, ಕಾನೂನಿನ ಹೆಚ್ಚಿನ ಜ್ಞಾನವನ್ನು ಪಡೆದುಕೊಂಡಿರತಕ್ಕಂಥವನಲ್ಲ. ನಾನೊಬ್ಬ ಸಾಮಾನ್ಯ ಮನುಷ್ಯ. ನಾನೊಬ್ಬ ಸಾಮಾನ್ಯ ಮನುಷ್ಯನಾಗಿ ನನ್ನ ದೃಷ್ಟಿಯಲ್ಲಿ ಅಥವಾ

ನನ್ನ ಆಲೋಚನೆಯಲ್ಲಿ ಏನು ಬಂತೋ ಅದಕ್ಕೆ ಮೊನ್ನೆ ದಿವಸ ನಾನು ಅವರಿಗೆ ಹೇಳಿದ್ದೇನೆ. No paisa could be paid to them – ಎನ್ನ ತಕ್ಕಂಥ ಮಾತನ್ನು ಉಪಯೋಗಿಸಿದ್ದೇನೆ. ಆದರೆ ಈಗ ಏನಾಗಿದೆ, ಆ ರೀತಿ ಹೇಳಬೇಕಾಗಿದ್ದರೆ ಅದಕ್ಕೆ ಕಾರಣ ಏನೆಂದರೆ ಮಾನ್ಯ ಮಂತ್ರಿಗಳು ಓದಿರತಕ್ಕಂಥ ಪತ್ರ. ಆ ಪತ್ರವನ್ನು ಓದಿಲ್ಲದಿದ್ದರೆ ನಾನು ಆ ಮಾತನ್ನು ಬಳಸತಕ್ಕಂಥ ಅವಕಾಶವಾಗಲೀ, ಬಳಸತಕ್ಕಂಥದ್ದು ಕೂಡಾ ಅದಕ್ಕೆ ಸ್ಕೋಪೇ ಇರಲಿಲ್ಲ. ಅವರು ಹೇಳಿದ್ದರಿಂದ ನಾನು ಆ ಮಾತನ್ನು ಬಳಸಬೇಕಾಗಿ ಬಂತು. ಆದರೆ ಇವತ್ತು ನನಗೆ ಆಶ್ಚರ್ಯವಾಗುತ್ತಿತ್ತು, ಅತ್ಯಂತ ತಪ್ಪು ಮಾಹಿತಿಯನ್ನು ಇಲ್ಲಿ ಕೊಟ್ಟಿರತಕ್ಕಂಥದ್ದು. ಯಾವುದೋ ಹಿಂದಿನ ಕಾಲಧಲ್ಲಿ ಬರೆದಿರತಕ್ಕಂಥ ಪತ್ರದಲ್ಲಿ ಈಗ ಬಂದಿರತಕ್ಕಂಥ ಪ್ರಶ್ನೆಗೆ ಉತ್ತರವಾಗಿ ಓಬಿರಾಯನ ಕಾಲದ ಉತ್ತರವನ್ನು ತಂದು ಇಟ್ಟು ನಮ್ಮನ್ನ ಈ ನಗೆಪಾಟಲಿಗೆ ಗುರಿಪಡಿಸತಕ್ಕಂಥ ರೀತಿಯಲ್ಲಿ ಮಾಡಿದ್ದಾರೆ. ಪತ್ರಿಕೆಯಲ್ಲಿ ಕೂಡಾ ಬಂದಿದೆ. ನಾವು ಜಡ್ಜಸ್‌ಗೆ ಕೊಡತಕ್ಕಂಥ ಸಂಬಳ ಸಾರಿಗೆ ಬಗ್ಗೆ ಇಲ್ಲಿ ಚರ್ಚೆಯಾಗಿದ್ದು ಅಲ್ಲಿ ಚರ್ಚೆಯಾಗಿ ನಾನು ಮಾತನಾಡಿದಂಥ ಮಾತು ಅಲ್ಲಿ ನಗೆಪಾಟಲಿಗೆ ಗುರಿಯಾಗಿದೆ. ಇವತ್ತು ನಾನು ನಗೆಪಾಟಲಿಗೆ ಗುರಿಯಾಗಿದ್ದೇನೆ. ಮಾನ್ಯ ಅಧ್ಯಕ್ಷರೇ. ಕಾರಣ ಏನೆಂದರೆ ಅದಕ್ಕೆ ನಾನು ಕಾರಣನಲ್ಲ. ನಾನಂತೂ ಕೂಡಾ ಯಾವ ವಿಧದಲ್ಲೂ ಕಾರಣನಲ್ಲ. ಅದಕ್ಕೆ ಕಾರಣನಾಗಿರತಕ್ಕಂಥದ್ದು ಈ ಉತ್ತರ ತಪ್ಪು ಮಾಹಿತಿಯನ್ನು ಮತ್ತು out of context ಆ ಪತ್ರವನ್ನು ಓದಿದ ಕಾರಣದಿಂದ ಇವತ್ತಿನ ದಿವಸ ನಾನು ನಗೆಪಾಟಲಿಗೆ ಗುರಿಯಾಗತಕ್ಕಂಥ ಪರಿಸ್ಥಿತಿ ಒದಗಿಬಂದಿದೆ ಒಂದು ರೀತಿಯಾದಂಥ ಅವಹೇಳನಕ್ಕೂ ಕೂಡಾ ನಾನು ಗುರಿಯಾಗಿದ್ದೇನೆ. ಇವತ್ತು ನನ್ನನ್ನು ರಕ್ಷಣೆ ಮಾಡಬೇಕಾಗಿರತಕ್ಕಂಥದ್ದು ಯಾರು? ನನಗೆ ಯಾರ ರಕ್ಷಣೆ ಇದೆ?

ಅಧ್ಯಕ್ಷರು : ಹೈಕೋರ್ಟಿನ ಕ್ಷಮೆ ಕೇಳಿದರೆ ಅಲ್ಲಿಗೆ ಮುಗಿಯಿತು. ಅಲ್ಲಿಗೆ ನಿಮಗೆ ರಕ್ಷಣೆ ಸಿಕ್ಕಿತು ಅಂತ ಆಯಿತು.

ಶ್ರೀ ಸಿ. ಬೈರೇಗೌಡ : ನಾನು ಕ್ಷಮೆ ಕೇಳಬೇಕಾಗಿದ್ದರೆ ನಾನು ಉದ್ದೇಶಪೂರ್ವಕವಾಗಿ ಏನಾದರೂ ಅದನ್ನು ಮಾಡಿದ್ದರೆ, ಆ ಮಾತನ್ನು ಹೇಳಿದ್ದರೆ ನಾನು ಕ್ಷಮೆ ಕೇಳಬೇಕಾಗಿರತಕ್ಕಂಥದ್ದು ಸರ್ವಥಾ ಆದುದು ನಾನಂತೂ ಕೂಡಾ ನಾನು ಯಾವಾಗಲೂ ತಲೆಬಾಗುತ್ತೇನೆ. ಉದ್ದೇಶಪೂರ್ವಕವಾಗಿ ನಾನು ಮಾಡಿದ್ದರೆ ಆದರೆ ನನಗೆ....

ಅಧ್ಯಕ್ಷರು : ಇದರಲ್ಲಿ ಹಕ್ಕುಚ್ಯುತಿಯಾಗಿದೆ, ಆಗಿಲ್ಲ ಎನ್ನುವುದರಲ್ಲಿ ಉದ್ದೇಶ್ಯ ಬಹಳ ಪ್ರಾಮುಖ್ಯವಾದಂಥ ವಿಚಾರವಾಗಿದೆ, ಆದ್ದರಿಂದ ಮುಂದುವರಿಸಿ ನಿಮ್ಮ ಭಾಷಣವನ್ನು.

ಶ್ರೀ ಸಿ. ಬೈರೇಗೌಡ : ಅದಕ್ಕೆ ನಾನು ಮೊದಲು ತಮಗೆ ಹೇಳಿದ್ದು. ಇದು ಆ ರೀತಿ ಮಾತನಾಡಬೇಕಾಗಿದ್ದರೆ ಇವರು ಕೊಟ್ಟಂಥ ಉತ್ತರವೇ ಕಾರಣ. ಸರ್ಕಾರ ಕೊಟ್ಟಂಥ ಉತ್ತರವೇ ಅದಕ್ಕೆ ಕಾರಣ. ನಾನಂತೂ ಕೂಡಾ ಯಾವ ವಿಧದಲ್ಲೂ ಕೂಡಾ ಕಾರಣನಲ್ಲ. ನಮ್ಮನ್ನು ನಗೆಪಾಟಲಿಗೆ ಗುರಿಮಾಡಿದ್ದರೆ ಇಲ್ಲಿ ಸದಸ್ಯರಾಗಿ ನಾವು ಕೆಲಸ ಮಾಡುತ್ತಿದ್ದರೆ ಇವರು ಸರ್ಕಾರ ಕೊಟ್ಟಂಥ ಮಾಹಿತಿಯನ್ನು ನಾವು ಅನುಸರಿಸಿ ನಾವು ಇಲ್ಲಿ ಚರ್ಚೆಯಲ್ಲಿ ಭಾಗವಹಿಸುತ್ತೇವೆ, ನಮಗೆ ತೋಚಿದ್ದನ್ನು ನಾವು ಹೇಳುತ್ತೇವೆ. ನಮಗೆ ತೋಚಿದ್ದನ್ನು ಹೇಳುತ್ತಿರತಕ್ಕಂಥದ್ದನ್ನು ನಾವು ಹೇಳಿದರೂ ಕೂಡಾ ನಮ್ಮನ್ನು ನಗೆಪಾಟಲಿಗೆ ಗುರಿಪಡಿಸತಕ್ಕಂಥ ಒಂದು ಸಂಚನ್ನು ಸರಕಾರದವರು ಮಾಡುವುದಾದರೆ, ನಾವು ಇಲ್ಲಿ ಸದಸ್ಯರಾಗಿ ನಿರ್ಭೀತರಾಗಿ ಕೆಲಸ ಮಾಡತಕ್ಕಂಥದ್ದಕ್ಕೆ ಆಗುವುದಿಲ್ಲ. ನಮ್ಮನ್ನು ಒಂದು ರೀತಿಯ ಭೀತಿಗೆ ಒಳಪಡಿಸಿ ಅಂಥ ಒಂದು ಸಂಚನ್ನು ಸರಕಾರ ಮಾಡಿದೆ ಆದ್ದರಿಂದ ಇದನ್ನು ಹಕ್ಕುಚ್ಯುತಿ ಸಮಿತಿಗೆ ನೇರವಾಗಿ ವಹಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

\+ ಶ್ರೀ ಬಿ.ಎಸ್. ಯಡಿಯೂರಪ್ಪ : (ಶಿಕಾರಿಪುರ) ಸನ್ಮಾನ್ಯ ಅಧ್ಯಕ್ಷರೇ, ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಿಕೊಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇದು ತುಂಬಾ ಸೂಕ್ತವಾಗಿರುವಂಥಾದ್ದು. ಇನ್ನೂ ಹೆಚ್ಚು ವಿವರಗಳಿಗೆ ನಾವು ಹೋಗುವುದರಿಂದ ಮತ್ತು ಹೆಚ್ಚು ಚರ್ಚೆಯಾಗುವುದರಿಂದ, ಅನಿವಾರ್ಯವಾಗಿ ಹೈಕೋರ್ಟಿನ ಉತ್ತರವನ್ನು ಪ್ರಸ್ತಾಪಿಸುವ

ಪ್ರಸಂಗ ಬಂದಿದೆ. ಮಾನ್ಯ ಸಂಸದೀಯ ಮಂತ್ರಿಯವರು ಉತ್ತರವನ್ನು ಕೊಡತಕ್ಕಂಥ ಸಂದರ್ಭದಲ್ಲಿ ನಾನು ಬಹಳ ಸ್ಪಷ್ಟವಾಗಿ ಒಂದು ಮಾತನ್ನು ಹೇಳಿದ್ದೆ ನೀವು ದಾಖಲೆಗಳನ್ನು ತೆಗೆದು ನೋಡಿ, ತಾವು ಕೊಡುತ್ತಿರುವಂಥ ಉತ್ತರ ಸರಿಯಾದುದಲ್ಲ. ಯಾವುದೋ ಒಂದು ಹಳೆಯ ಉತ್ತರವನ್ನು ಕೊಡುವಂಥ ಪ್ರಯತ್ನವನ್ನು ಮಾಡುತ್ತಾ ಇದ್ದೀರಿ. ಅದನ್ನು ಪರಿಶೀಲನೆ ಮಾಡಿ, ಮತ್ತೊಮ್ಮೆ ದಾಖಲೆಗಳನ್ನು ನೋಡಿ ಅದನ್ನು ಸದನಕ್ಕೆ ಒದಗಿಸಿಕೊಡಿ ಎಂದು ನಾನು ಆ ಸಂದರ್ಭದಲ್ಲಿ ಹೇಳಿದ್ದೆ. ತಾವುಗಳು ಉತ್ತರವನ್ನು ಓದಿದ್ದೀರಿ. ಆ ಸಮಯದಲ್ಲಿ ತಾವುಗಳು ಅದರ ಡೇಟನ್ನು ಹೇಳಲಿಲ್ಲ. ಅದು ರಿಜಿಸ್ಟ್ರಾರ್ ಕೊಟ್ಟ ಉತ್ತರ. ಒಂದು ವೇಳೆ ಆಗ ತಾವು ಡೇಟ್ ಹೇಳಿದ್ದರೆ, ಆ ಸಮಯದಲ್ಲಿಯೇ ನಾವು ಸರಕಾರ ಈ ರೀತಿ ಸದನಕ್ಕ ಉತ್ತರ ಕೊಡುವಂಥ ಸಂದರ್ಭದಲ್ಲಿ ಒಂದು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು, ಈ ರೀತಿಯಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಳ್ಳಬಾರದು ಎಂದು ಹೇಳಿ ಸರಿಯಾದಂಥ ಉತ್ತರವನ್ನು ಪಡೆಯುವಂಥ ಪ್ರಯತ್ನವನ್ನು ನಾವು ಮಾಡುತ್ತಾ ಇದ್ದೆವು. ಆದರೆ ಇಷ್ಟೊಂದು ನುರಿತ ಒಬ್ಬ ಹಿರಿಯ ಸಚಿವರು, ರಿಜಿಸ್ಟ್ರಾರ್‌ರವರ ಪತ್ರವನ್ನು ಓದುವಂಥ ಸಂದರ್ಭದಲ್ಲಿ ಆ ದಿನಾಂಕವನ್ನು ಸರಿಯಾಗಿ ನೋಡಿದ್ದರೆ ಬಹುಶಃ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ಈ ಸದನಕ್ಕೆ ಸರಕಾರದವರು ಕೊಡುವಂಥ ಉತ್ತರದ ಬಗ್ಗೆ ಎಷ್ಟರಮಟ್ಟಿಗೆ ನಾವು ನಂಬಬಹುದು ಎಂಬ ಪ್ರಶ್ನೆ ಈ ಉತ್ತರದಿಂದ ಉದ್ಭವವಾಗಿದೆ. ಇನ್ನು ಮುಂದೆ ಆ ಉತ್ತರಗಳ ನಿಜವಾದ ದಾಖಲೆಗಳು ಏನಿವೆ, ಪ್ರತಿಗಳು ಏನಿವೆ, ಅದನ್ನು ನಮಗೆ ಒದಗಿಸಿಕೊಡಿ ಎಂದು ಕೇಳುವಂಥ ಮಟ್ಟಕ್ಕೆ ಇವೊತ್ತು ತಾವುಗಳು ಈ ರೀತಿಯ ಉತ್ತರವನ್ನು ಕೊಟ್ಟು ಸದನವನ್ನು ತಪ್ಪು ದಾರಿಗೆ ಎಳೆದು ಹೈಕೋರ್ಟಿನ ಬಗ್ಗೆ ನಾವು ಮಾತನಾಡುವಂಥ ಒಂದು ಸಂದರ್ಭವು ಬಂದು, ಹೈಕೋರ್ಟಿಗೂ, ಶಾಸಕಾಂಗಕ್ಕೂ ಭಿನ್ನಾಭಿಪ್ರಾಯ ಇದೆಯೆನ್ನುವಂಥ ಒಂದು ವಾತಾವರಣವನ್ನು ಮೂಡಿಸುವಂಥ ಒಂದು ಪ್ರಯತ್ನ ಏನಾಗಿದೆ ಅದರ ಸಂಪೂರ್ಣ ಜವಾಬ್ದಾರಿಯನ್ನು ಸರಕಾರದವರು ವಹಿಸಿಕೊಳ್ಳುವಂಥ ಸಂದರ್ಭ ಒದಗಿಬಂದಿದೆ. ಮಾನ್ಯ ಅಧ್ಯಕ್ಷರೇ, ಇದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡದೇನೆ ಮುಖ್ಯಮಂತ್ರಿಯವರು ಉನ್ನತ ಸ್ಥಾನದಲ್ಲಿರುವಂಥವರು, ಯಾವುದೇ ಉತ್ತರವನ್ನು ಅಧಿಕಾರಿಗಳು ಕೊಟ್ಟರೂ ಸಹ ಅದನ್ನು ಅಪ್ರೂವ್ ಮಾಡುವುದಕ್ಕಿಂಥ ಮುಂಚೆ ಯೋಚನೆ ಮಾಡಬೇಕಾಗಿತ್ತು, ಹಾಗೆ ಯೋಚನೆ ಮಾಡುವಂಥ ಪರಿಸ್ಥಿತಿಯಲ್ಲಿ ಅವರು ಇಲ್ಲ, ಯಾವುದೇ ರೀತಿಯಲ್ಲಿ ಒಂದು ರೀತಿಯಲ್ಲಿ ಹಗುರವಾಗಿ ಉತ್ತರ ಕೊಡತಕ್ಕಂಥ ಪ್ರವೃತ್ತಿ ಇಲ್ಲಿ ಬೆಳೆದಿದೆ ಎನ್ನುವುದು ಕಾಣುತ್ತಿದೆ. ನಿಜಕ್ಕೂ ಸಹ ನಮ್ಮ ಸದನಕ್ಕೆ ಅಗೌರವ ತರುವ ರೀತಿಯಲ್ಲಿ ಒಂದು ಬೇಜವಾಬ್ದಾರಿಯುತವಾಗಿ ಸರಕಾರ ನಡೆದುಕೊಂಡಿದೆ ಎಂದು ಅನಿವಾರ್ಯವಾಗಿ ಹೇಳತಕ್ಕಂಥ ಸಂದರ್ಭ ಒದಗಿಬಂದಿದೆ. ಆದ್ದರಿಂದ ಇದನ್ನು ನೇರವಾಗಿ ಹಕ್ಕುಬಾಧ್ಯತ ಸಮಿತಿಗೆ ಕಳುಹಿಸಿಕೊಡಿ. ಅನೇಕ ಮೂಲ ಪ್ರಶ್ನೆಗಳು ಇಲ್ಲಿ ಉದ್ಭವವಾಗುತ್ತವೆಯಾದುದರಿಂದ ಇದನ್ನು ಹಕ್ಕುಬಾದ್ಯತ ಸಮಿತಿಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಸರಕಾರದವರು ಮೊನ್ನೆ ನೀಡಿದಂಥ ಪ್ರಶ್ನೆಯಿಂದ ಇದು ಉದ್ಭವವಾಗಿದೆ. ಇದು ಬಹಳ ಗಂಭೀರವಾದಂಥ ಪ್ರಶ್ನೆ. ಮೊನ್ನೆ ಹೈಕೋರ್ಟ್‌ನವರು ಈ ರೀತಿಯಾದಂಥ ಉತ್ತರವನ್ನು ನಮಗೆ ಕೊಟ್ಟಿದ್ದಾರೆಂದು ಹೇಳಿದ್ದರಿಂದ ಈ ಸದನಕ್ಕೆ ಉಚ್ಚ ನ್ಯಾಯಾಲಯವೇ ಅಗೌರವವನ್ನು ಮಾಡಿರಬಹುದು ಎನ್ನತಕ್ಕಂಥ ಒಂದು ಭಾವನೆ ನಮ್ಮನ್ನು ಕೆರಳಿಸಿದ್ದರಿಂದ ನಾವು ಅನೇಕ ಮಾತುಗಳನ್ನು ಈ ಸದನದಲ್ಲಿ ಆಡತಕ್ಕಂಥ ಪರಿಸ್ಥಿತಿಯು ಒದಗಿಬಂದಿತ್ತು. ಈ ಮಾತುಗಳನ್ನು ನಾವು ಆಡಬೇಕಾದರೆ, ಮೂಲಭೂತವಾಗಿ ಇದಕ್ಕೆ ಸರಕಾರವೇ ಹೊಣೆ. ಈ ಸದನಕ್ಕೆ ಸರಕಾರದವರು ಒದಗಿಸಿರತಕ್ಕಂಥ ಪ್ರಶ್ನೆಗಳಿಗೆ ಉತ್ತರ ಮುಖ್ಯಮಂತ್ರಿಗಳ ಹೆಸರಿನಲ್ಲಿ ಬಂದಿದೆ. ಮುಖ್ಯಮಂತ್ರಿಗಳ ಗೈರು ಹಾಜರಿಯಲ್ಲಿ ಮಾನ್ಯ ಸಂಸದೀಯ ಸಚಿವರು ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. ಮತ್ತು ಉಚ್ಚನ್ಯಾಯಾಲಯದಿಂದ ಬಂದಿರತಕ್ಕಂಥ ಪತ್ರವನ್ನು ಇಲ್ಲಿ ಓದಿದ್ದಾರೆ. ನನಗನ್ನಿಸುತ್ತದೆ, ಸರಕಾರದವರು ಕೊಟ್ಟ ಉತ್ತರದ ಮೇಲೆ, ಇವೊತ್ತು ಹೈಕೋರ್ಟ್‌ನ ರಿಜಿಸ್ಟ್ರಾರ್‌ರವರು ಕೊಟ್ಟಿರತಕ್ಕಂಥ ಸ್ಪಷ್ಟನೆಯನ್ನು ನೋಡಿದಾಗ, ಬೆಳಿಗ್ಗೆ ಐದು ಗಂಟೆಗೆ

ಪತ್ರಿಕೆಯನ್ನು ಓದಿದಾಗ ನನಗನ್ನಿಸಿತು, ನಾವು ಅಚಾತುರ್ಯ ಮಾಡಿ ಬಿಟ್ಟಿದ್ದೇವೆ. ಈ ಸದನದಲ್ಲಿ ಸರಕಾರ ಏನು ಉತ್ತರ ಕೊಟ್ಟಿತು ನಾವು ಏನೋ ಮಾತಾಡಿದೆವು, ವಿಷಯ ಎಲ್ಲಿಗೋ ಹೋಗಿ ತಲುಪಿತಲ್ಲ ಅಚಾತುರ್ಯ ಮಾಡಿದ್ದೇವೆ ಎಂದು ನನಗೆ ಭಾಸವಾಯಿತು. ಸುದೈವದಿಂದ ತಾವು ಸಭೆಯನ್ನು ಮುಂದುವರಿಸಿದ್ದರಿಂದ ಈ ವಿಚಾರವನ್ನು ಜನತೆಗೂ, ದೇಶಕ್ಕೂ ಮತ್ತು ನ್ಯಾಯಾಂಗಕ್ಕೂ ಹೇಳತಕ್ಕಂಥ ಒಂದು ಅವಕಾಶ ನಮಗೆ ದೊರಕಿತು.

ಅದಕ್ಕಾಗಿ ತಮಗ ನಾನು ಅಭಿನಂದನೆ ಸಲ್ಲಿಸುತ್ತೇನೆ. ತಾವು ಈ ಸದನದ ಗೌರವ–ಘನತೆಯನ್ನು ಎತ್ತಿಹಿಡಿಯುವುದರಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದ್ದೀರಿ. ತಮಗೆ ನಾವು ಅಭಾರಿಯಾಗಿದ್ದೇವೆ. ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಮತ್ತು ಪತ್ರಿಕಾ ರಂಗ, ಹೋರಾಟಕ್ಕಿಳಿಯಬೇಕೆಂಬುದು ನಮಗೆ ಯಾರಿಗೂ ಇಲ್ಲ. ನ್ಯಾಯಾಂಗದ ಬಗ್ಗ ನಮಗೆ ಅಪಾರವಾದ ಗೌರವವಿದೆ. ಬಹಳ ಎತ್ತರವಾಗಿ ಅದನ್ನು ನಾವು ನೋಡುತ್ತಿದ್ದೇವೆ. ಇವತ್ತು ಉದ್ಭವವಾಗಿರುವ ಪರಿಸ್ಥಿತಿ ಕರ್ನಾಟಕದ ಇತಿಹಾಸದಲ್ಲಿಯೇ ಶಾಸನಸಭೆಯಲ್ಲಿ ಉದ್ಭವಾಗಿರಲಿಲ್ಲ ಅಂತ ನಾನು ಅಂದುಕೊಂಡಿದ್ದೇನೆ. ನಾನು 1967ರಲ್ಲಿ ಶಾಸಕನಾಗಿದ್ದ, 1972ರಲ್ಲಿದ್ದ, ತಾವೂ ಈ ಸದನದಲ್ಲಿ ಶಾಸಕರಾಗಿ, ಸಚಿವರಾಗಿಯೂ ಇದ್ದೀರಿ ಮತ್ತು ಸದನದ ಅಧ್ಯಕ್ಷರಾಗಿಯೂ ತಾವಿದ್ದೀರಿ. ತಮ್ಮ ಗಮನಕ್ಕ ಬಂದಿರೋದ್ರಲ್ಲೂ ಸಹ ಇಂತಹ ಪರಿಸ್ಥಿತಿ ಇಲ್ಲ. ಇವತ್ತು ಹೈಕೋರ್ಟ್‌ನವರು ಏನು ಹೇಳಿದ್ದಾರೆ ಹೈಕೋರ್ಟ್‌ನ್ನು ಸರ್ಕಾರ ಸಂಪರ್ಕಿಸಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟಿದೆ. ಮತ್ತು ಸದನದಲ್ಲಿ ಕೊಟ್ಟಿರುವ ಪ್ರಶ್ನೆಗೆ ಉತ್ತರ ಅದು ನಾವು ಕೊಟ್ಟಿದ್ದಲ್ಲ, 8–9 ತಿಂಗಳ ಹಿಂದೆ ಬಂದಿರುವ ಹಳೇ ಉತ್ತರ ಅಂತಾರೆ ಅವರು. ಮಾನ್ಯ ಸಚಿವರು ನಿನ್ನೆ ಒಂದು ರಿಜಿಸ್ಟ್ರಾರ್ ಕಳುಹಿಸಿರುವ ಪತ್ರವನ್ನು ಓದಿದರು. ಆ ಪತ್ರದ ದಿನಾಂಕ ಯಾವುದು ಎಂದು ಅವರು ಸ್ಪಷ್ಟಪಡಿಸಬೇಕಾದ್ದು ಅವರ ಕರ್ತವ್ಯವಾಗಿತ್ತು. ಈ ಪ್ರಶ್ನೆಗೆ ಉತ್ತರದಲ್ಲಿ 31–3–92.......

ಶ್ರೀ ಆರ್.ಎನ್. ನಾಯಕ್ : ಹಳೇ ತಾರೀಖಿನಲ್ಲಿ ಅದೇ ಉತ್ತರ ಕೊಟ್ಟಿದ್ದರೆ ಅದು ಸರಿ ಅಂತ ನಿಮ್ಮ ಭಾವನೇನಾ? ಈಗ ಹಳೆಯ ತಾರೀಖಿಗೆ ಉತ್ತರ ಕೊಟ್ಟಿದ್ದಾರೆ, ನೀವು ಹಳೆಯ ತಾರೀಖು ಎಂದು ಹೇಳುತ್ತಿದ್ದೀರಿ, ಇವತ್ತು ಪೇಪರ್‌ನಲ್ಲಿ ಬಂದಿದೆಯೆಂದು ಹೇಳಿದ್ದೀರಿ. ಈಗ ಹೊಸದಾಗಿ ಕಳುಹಿಸಿದಾಗ ಬೇರೆ ಉತ್ತರವನ್ನು ಕೊಡಬೇಕಾದ್ದು ನಿಜ. ಆದರೆ, ಹಳೆಯ ತಾರೀಖಿಗೆ ಕೊಟ್ಟ ಉತ್ತರವನ್ನೇ ನೀವು ಸರಿ ಎಂದು ಒಪ್ಪಿಕೊಳ್ಳುತ್ತೀರಾ? ಇದರ ಬಗ್ಗೆ ನೀವು ಸ್ವಲ್ಪ ವಿಚಾರ ಮಾಡಿ. ಹೈಕೋರ್ಟ್ ಆರೀತಿ ಉತ್ತರವನ್ನು ಹಿಂದೆ ಬೇರೆ ಯಾವುದೋ ಹಳೆಯ ತಾರೀಖಿಗೆ ಕೊಟ್ಟಿದ್ದರೆ ಅದನ್ನೇ ಸರಿ ಎಂದು ನೀವು ಹೇಳುತ್ತೀರಾ? ಇದರ ಬಗ್ಗೆ ಸ್ವಲ್ಪ ವಿಶ್ಲೇಷಣೆ ಮಾಡಿ, ಚರ್ಚೆಯಾಗಲಿ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳೋದು ಅವತ್ತಿನ ಸಂದರ್ಭ ಬೇರೆ. ಅವರು ಯಾವುದಕ್ಕೆ ಉತ್ತರ ಕೊಟ್ಟರು, ಬಿಟ್ಟರು ಅಂತ ಅದರ ಬಗ್ಗೆ ನಾನು ಈಗ ಚಿಂತನೆ ಮಾಡುವುದಕ್ಕೆ ಹೋಗುವುದಿಲ್ಲ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಅವರು ಯಾವ ಪ್ರಶ್ನೆಗೆ ಆ ಉತ್ತರ ಕಳುಹಿಸಿದ್ದರೋ ಗೊತ್ತಿಲ್ಲ. ನಮಗೆ ಬೇಕಾಗಿರುವುದು : ಈ ಪ್ರಶ್ನೆಗೆ ಉತ್ತರ ಕಳಿಸಿದ್ರಾ ಅವರು?

ಶ್ರೀ ಬಿ.ಎಸ್. ಯಡಿಯೂರಪ್ಪ ': ಇನ್ನು 5–10 ವರ್ಷ ಇದೇ ಉತ್ತರವನ್ನು ಕೊಡುತ್ತೀರುತ್ತೀರಿ. ಇನ್ನು ಮುಂದ ಹೈಕೋರ್ಟ್, ಸುಪ್ರೀಂ ಕೋರ್ಟು ಕೊಟ್ಟಿರುವಂಥ ಉತ್ತರವನ್ನೇ ಇಟ್ಟುಕೊಂಡು ಬಿಡಿ ಒಂದೊಂದು ಇಲಾಖೆಯಿಂದ ಒಂದು ಪ್ರಶ್ನೆಗೆ ಉತ್ತರ ಇರುತ್ತದೆ. ಅದನ್ನೇ ಬೇಸ್ ಆಗಿ ಇಟ್ಟುಕೊಂಡು ಎಲ್ಲಾದಕ್ಕೂ ಅದೇ ಉತ್ತರ ಕೊಡುತ್ತಾ ಹೋಗಿ, ಮತ್ತೇ ಕೇಳುವಂಥ ಅಗತ್ಯವೇ ಇರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಏಳು ತಿಂಗಳ ಹಿಂದೆ ಹೈಕೋರ್ಟ್ ಕೊಟ್ಟ ಉತ್ತರವನ್ನು ಇವತ್ತು ಇದಕ್ಕೂ ಅದೇ ಉತ್ತರ ಅಂತ ಒದಗಿಸುವುದಾದರೆ ಸರ್ಕಾರ ಇಲ್ಲ ಅಂತ ನಮ್ಮ ತೀರ್ಮಾನ.

ಶ್ರೀ ಎಂ. ವೀರಪ್ಪ ಮೊಯಿಲಿ : ನಮ್ಮ ಹತ್ತಿರ ಮಾಹಿತಿ ಇದೆ ಉತ್ತರ ಕೊಡ್ತನೆ. ಇದು ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದರೆ ತಾವು ಹೇಳುವುದು ಸರಿ. ಅನೇಕ ಪ್ರಶ್ನೆಗಳನ್ನು ಕಳುಹಿಸಿ, ಉತ್ತರ ತರಿಸಿ, ತರಿಸಿ ಕೊನೆಗೆ ಈ ಕ್ರಮ. ನಾನು ಕೊನೆಗೆ ತಮಗೆ ಉತ್ತರವನ್ನು ಹೇಳ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ತಾವು ಕಳುಹಿಸಿದ ಪ್ರಶ್ನೆಗೆ ಅವರು ಕಳುಹಿಸಿದ್ದ ಉತ್ತರವೇ ಅದು? ಅದಲ್ಲದೇ ಇದ್ದರೆ ಹಕ್ಕುಚ್ಯುತಿ ಆಗುತ್ತದೆಯೋ ಅಥವಾ ಇಲ್ಲವೋ?

ಶ್ರೀ ಆರ್. ಎನ್. ನಾಯಕ್ : ತಣ್ಣೀರಾದರೂ ಆರಿಸಿಕೊಂಡು ಕುಡಿಯಬೇಕೆಂದು ಗಾದೆ ಇದೆ. ತಣ್ಣೀರು ಆದರೂ ಒಂದೊಂದು ಸಲ ಎಲ್ಲಾ ಕುಡಿದು ಬಿಡೋಕೆ ಆಗೋದಿಲ್ಲ. ನೀವು ಹೈಕೋರ್ಟ್ ವಿಚಾರ ಎತ್ತಿದಾಗ ನಾನಿಲ್ಲಿ ಕೂತು ಹೇಳಿದೆ. ಸ್ವಲ್ಪ ನಿಮ್ಮನ್ನು ಕೆಣಕಿದೆ. ಆದರೆ, ನೀವು ಮಾತಾಡಿದ್ದೇ ಮಾತಾಡಿದ್ದು. ಈಗ ನೀವು ಅದನ್ನು ಸರ್ಕಾರದ ಮೇಲೆ ಹೇಳಲು ಹೋದರೆ ಹೇಗೆ? ನೀವು ಮಾತಾಡಿದನ್ನು ನೀವು ಅರಗಿಸಿಕೊಳ್ಳಿ. ಇನ್ನು ಮುಂದಾದರೂ ಮಾತನಾಡುವಾಗ ಸ್ವಲ್ಪ ಎಚ್ಚರಿಯನ್ನು ವಹಿಸಬೇಕ. ಎಲ್ಲರೂ ಅಷ್ಟ ಸ್ವಲ್ಪ ಎಚ್ಚರಿಕೆಯಿಂದ ಇರಿ. ಏನು ನಿಮಗೆ ಅಂಥ ಆತುರದ ಭಯ. ಇಲ್ಲಿ ಎಲ್ಲಾ ಮಾಡಿ ಈಗ ಏಕ್‌ದಂ ಭಯ ಬಂದುಬಿಟ್ಟಿದೆ. ಏನೂ ಅಪಾಯ ಇಲ್ಲ. ಸ್ವಲ್ಪ ವಿಚಾರ ಮಾಡಿ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ಮಾನ್ಯ ನಾಯಕರು ಹೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಆ ಉತ್ತರ ಬರಬೇಕಾದ್ದರೆ ಇವತ್ತು ಏನು ಪ್ರಶ್ನೆ ಅಲ್ಲಿ ಹೋಗಿತ್ತು ಎಂದು ನಮಗೆ ಗೊತ್ತಿಲ್ಲ. ಆ ಪ್ರಶ್ನೆ ಯಾವ ರೀತಿಯಾಗಿ ಹೈಕೋರ್ಟ್‌ಗೆ ಹೋಗಿತ್ತು, ಆದಕ್ಕೆ ಆ ಉತ್ತರ ಸಮಂಜಸ ಇಲ್ಲ ಎನ್ನತಕ್ಕಂಥದ್ದನ್ನು ನಾವು ಹೇಳಬೇಕಾಗಿದ್ದರೆ ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ ಆ ಪ್ರಶ್ನೆಗೆ ಈ ಉತ್ತರ ಸಮರ್ಪಕವಾಗಿಲ್ಲ ಎಂದದು ಹೇಳಬಹುದು. ಇಷ್ಟಕ್ಕೇ ಮಾನ್ಯ ನಾಯಕರು ತೃಪ್ತರಾದರು ಎಂದು ಅನಿಸುತ್ತದೆ.

ಶ್ರೀ ಆರ್.ಎನ್. ನಾಯಕ್ :– ಅವರವರ ಪ್ರಶ್ನೆಗಳಿಗೆ ಅವರವರೇ ಮಾತನಾಡಿಬಿಟ್ಟರೆ ಈ ಪ್ರಾಬ್ಲಮ್ಮೇ ಬರುವುದಿಲ್ಲ. ಸುಮ್ಮನೆ ಯಾರದೋ ಪ್ರಶ್ನೆಗೆ ಎಲ್ಲರೂ ನೋಡುವುದಿಲ್ಲ, ಮಾಡುವುದಿಲ್ಲ, ಮಾತನಾಡುತ್ತಿರುವುದು. ಅದೇ ಸಮಸ್ಯೆ ಬಂದಿರುವುದು. ನೀವು ಎಲ್ಲರೂ ಆ ದಿವಸ ಮಾತನಾಡಿಬಿಟ್ರಿ. ಟೈಮ್ ತೆಗೆದುಕೊಂಡು ಮಾತನಾಡಿದರೇ? ಇಲ್ಲ. ಸುಮ್ಮನೆ ಮಾತನಾಡುತ್ತಿದ್ದೀರಿ. ಅದಕ್ಕೆ ಆ ರೀತಿ ಆಗಿದೆ ಈ ಸಂದರ್ಭ.

ಶ್ರೀ ಸಿ. ಬೈರೇಗೌಡ :– ಅದು ಹೇಗೆ ಮಾತನಾಡುವುದಕ್ಕಾಗುತ್ತದೆ?

ಶ್ರೀ ವಾಟಾಳ್ ನಾಗರಾಜ್ :– ಯಾರಾದರೂ . . . .

ಅಧ್ಯಕ್ಷರು:– ಅವರು ಹೇಳುತ್ತಿದ್ದಾರೆ, ತಣ್ಣೀರನ್ನು ಆರಿಸಿ ಕುಡಿಯಿರಿ ಎಂದು ಹೇಳುತ್ತಿದ್ದಾರೆ. ಅಷ್ಟು ಮಾಡಿ ನೀವು ಈಗ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಅದು ಅವರು ಮಾಡಬೇಕಾಗಿರುವ ಕೆಲಸ. ಸರ್ಕಾರ ಇಕ್ಕಟ್ಟಿಗೆ ಸಿಕ್ಕಿಕೊಂಡಿದೆ.

ಶ್ರೀ ವಾಟಾಳ್ ನಾಗರಾಜ್ :– ತಣ್ಣೀರನ್ನು ಆರಿಸಿ ಕುಡಿಯಬೇಕಾಗಿರುವುದು ಸರ್ಕಾರ. ಸಿಕ್ಕಿರುವುದು ಅವರು.

ಅಧ್ಯಕ್ಷರು :– ಕ್ಯಾಪ್ ಯಾರಿಗೆ ಫಿಟ್ ಆಗುತ್ತದೋ ಅವರು ಹಾಕಿಕೊಳ್ಳಲಿ.

ಶ್ರೀ ವಾಟಾಳ್ ನಾಗರಾಜ್ :– ಹೌದು ಸಾರ್. ತಪ್ಪೇನೂ ಇಲ್ಲ. ನಾವು ಯಾವಾಗಲೂ ತಣ್ಣೀ ಯಾವುದು, ಬಿಸಿನೀರು ಯಾವುದು ಎಂದು ಯೋಚನೆ ಮಾಡುತ್ತಿದ್ದೇವೆ. ಅದರಲ್ಲಿ ಏನೂ ಇಲ್ಲ. ತಣ್ಣೀರು, ಬಿಸಿನೀರು ಎಂದೂ ಒಂದೇ ಸರ್ಕಾರಕ್ಕೆ.

ಅಧ್ಯಕ್ಷರು :– ಆಯಿತು ನೋಡೋಣ. ಲಾ ಮಿನಿಸ್ಟರ್, ಪಾರ್ಲಿಮೆಂಟ್ರಿ ಮಿನಿಸ್ಟರ್ ಏನು ಹೇಳುತ್ತಾರೋ ಕೇಳೋಣ.

ಶ್ರೀ ಡಿ.ಬಿ. ಚಂದ್ರೇಗೌಡ :– ವಾಟಾಳ್ ನಾಗರಾಜ್‌ರವರ ಟೋಪಿ ಅವರ ತಲೆಗಷ್ಟೇ ಫಿಟ್ ಆಗುತ್ತದೆ. ನಾವು ಹೇಗೆ ಹಾಕಿಕೊಳ್ಳುವುದು? ತಾವು ಅಪ್ಪಣೆ ಕೊಟ್ಟುಬಿಟ್ರೆ ಹೀಗಂತ !

ಶ್ರೀ ವಾಟಾಳ್ ನಾಗರಾಜ್ :— ನಾನು ತಮಗೆ ಹೇಳುತ್ತೇನೆ, ಟೋಪಿ ಪ್ರಶ್ನೆ ಬರಲಿಲ್ಲ ಇಲ್ಲಿ.

ಅಧ್ಯಕ್ಷರು :— ಅದೊಂದು ಗಾದೆ ಹೇಳಿದ್ದು ನಾನು. ಒಳ್ಳೆಯ ತಮಾಷೆಯಾಯಿತಲ್ಲಾ.

ಶ್ರೀ ವಾಟಾಳ್ ನಾಗರಾಜ್ :— ನೀವು ಗಾದೆ ಹೇಳಿದಿರಿ.

ಅಧ್ಯಕ್ಷರು :— ಅದನ್ನು ನಾನು ವಾಪಸ್ ತೆಗೆದುಕೊಳ್ಳುತ್ತೇನೆ. ನಿಮ್ಮ ಟೋಪಿ ಬಗ್ಗೆ ನನ್ನ ಕಣ್ಣೇ ಬೀಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ನಾನು ಏನು ಹೇಳಿದೆ ಅಂಥ.? ನಾನು ಏನು ಹೇಳಿದೆ ನಿಮಗೆ? ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು :— ಇವರದು. (ಮಾನ್ಯ ಚಂದ್ರೇಗೌಡರನ್ನು ಉದ್ದೇಶಿಸಿ)

ಶ್ರೀ ವಾಟಾಳ್ ನಾಗರಾಜ್ :— ವಿರೋಧ ಪಕ್ಷದ ನಾಯಕರು ನನ್ನನ್ನು ಕುರಿತು ಹೇಳುತ್ತಿದ್ದಾರೆ.

ಅಧ್ಯಕ್ಷರು :— ನಮ್ಮದು ನಿಮ್ಮದು ಸಂಬಂಧ ಚೆನ್ನಾಗಿ ಇದೆ. ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ :— ಅದನ್ನು ಇವರು ಕೆಡಿಸುವುದಕ್ಕೆ ಸಾಧ್ಯವಿಲ್ಲ ಬಿಡಿ. ಅದು ಸಾಧ್ಯವಿಲ್ಲ. ಈ ಪ್ರಶ್ನೆ ಮಾನ್ಯ ರಾಮಲಿಂಗರೆಡ್ಡಿಯವರ ಪ್ರಶ್ನೆಗೆ ನಾವು ಸೀಮಿತವಾಗಿರತಕ್ಕಂಥದ್ದು. ರಾಮಲಿಂಗರೆಡ್ಡಿಯವರ ಪ್ರಶ್ನೆಗೆ ಬಂದಿರತಕ್ಕಂಥ ಉತ್ತರದ ಬಗ್ಗೆ ಚರ್ಚೆ ನಡೆಯುತ್ತಿರತಕ್ಕಂಥದ್ದು. ಆದುದರಿಂದ ಇವತ್ತು ರಿಜಿಸ್ಟ್ರಾರ್‌ರವರು ಸ್ಪಷ್ಟನೆ ಹೇಳಿದ್ದಾರೆ. ಈ ಉತ್ತರ ನಮ್ಮದಲ್ಲ ಎಂದು. ಕೊಟ್ಟಿರತಕ್ಕಂಥ ಉತ್ತರ ಒಂಭತ್ತು ತಿಂಗಳ ಹಿಂದಿನದು. ಆದುದರಿಂದ ಇದು ತಪ್ಪು ದಾರಿಗೆ ಎಳೆಯುತಕ್ಕಂಥ ದೃಷ್ಟಿಯಾಗಿದೆ. ನಾನು ಆದಕ್ಕೋಸ್ಕರ ಹೇಳುತ್ತಿದ್ದೇನೆ, ನಾನು ನಿನ್ನೆ ಮಾತನಾಡುವಾಗ ನಾನು ಏನು ಹೇಳಿದೆ, ಉಚ್ಚ ನ್ಯಾಯಾಲಯದವರು ಶಾಸಕಾಂಗವನ್ನು ಏನಾದದರೂ ಕಡೆಗಾಣಿಸಿದ್ದಾರೋ ಎಂದು ಹೇಳಿ ಇದರ ಬಗ್ಗೆ ಹಕ್ಕುಚ್ಯುತಿಯನ್ನು ತರಬೇಕು ಎನ್ನತಕ್ಕಂಥ ಮಾತನ್ನು ನಾನು ಬಳಸಿದೆ. ಇದು ಅವರ ಮೇಲೆ ಹಕ್ಕುಚ್ಯುತಿಯನ್ನು ತರತಕ್ಕಂಥದ್ದಲ್ಲ. ಇದು ನೇರವಾಗಿ ಸರ್ಕಾರದ ಮೇಲೆ, ಮಾನ್ಯ ಮುಖ್ಯಮಂತ್ರಿಗಳ ಮೇಲೆ ಜವಾಬ್ದಾರಿಯನ್ನು ಅವರ ಮೇಲೆ ಹಾಕಿ ಹಕ್ಕುಚ್ಯುತಿಯನ್ನು ತರತಕ್ಕಂಥದ್ದು. ಆದುದರಿಂದ ಈ ಅಚಾತುರ್ಯವನ್ನು ನಿನ್ನೆ ನಾವು ಏನು ಮಾಡಿದ್ದೇವೆ ನಾನು ನನ್ನ ದೃಷ್ಟಿಯಲ್ಲಿ ಮಾತನಾಡುವಾಗ ಸರ್ಕಾರ ಕೊಟ್ಟಿರತಕ್ಕಂಥ ಮಾಹಿತಿ, ಸರ್ಕಾರ ಒದಗಿಸಿರತಕ್ಕಂಥ ಮಾಹಿತಿ ಸದನವನ್ನು ತಪ್ಪುದಾರಿಗೆ ಎಳೆದಿದ್ದರಿಂದ ನಾವು ಅಚಾತುರ್ಯವಾಗಿ ಕೆಲವು ಮಾತುಗಳನ್ನು ಮಾತನಾಡಿದ್ದೇವೆ. ಆದುದರಿಂದ ನಾನು ಪ್ರಮುಖವಾಗಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಇದು ನೇರವಾಗಿ ಹಕ್ಕುಚ್ಯುತಿಗೆ ಒಂದು ಅಮೂಲ್ಯವಾದಂಥ ವಸ್ತುವಾಗಿದೆ. ದಯಮಾಡಿ ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ತಾವು ಕಳುಹಿಸಲೇಬೇಕು. ಇದನ್ನು ಕಳುಹಿಸದೇ ಇರತಕ್ಕಂಥ ವ್ಯವಸ್ಥೆಗೆ ತಾವು ಹೋಗಬಾರದು ಎಂದು ತಮ್ಮಲ್ಲಿ ಕಳಕಳಿಯಿಂದ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಪ್ರೊ : ಎಂ.ಡಿ. ನಂಜುಡಸ್ವಾಮಿ :— (ದಾರವಾಡ ಗ್ರಾಮಾಂತರ) ಮಾನ್ಯ ಸಭಾಧ್ಯಕ್ಷರೇ, ಪ್ರಾಮಾಣಿಕವಾಗಿ ಹೇಳುವುದಾದರೆ ನಾನು ವೈಯುಕ್ತಿಕವಾಗಿ ಈ ಒಂದು ತಿಂಗಳಿಂದ ಈ ಒಂಭತ್ತನೇ ವಿಧಾನಸಭೆಗೆ ನಾನು ಏತಕ್ಕೆ ಆಯ್ಕೆಯಾಗಿ ಬಂದೆ ಎಂದು ಅನಿಸುತ್ತಿದೆ. ಇದನ್ನು ನಿಜವಾಗಿಯೂ ಬಹಳ ಬೇಜಾರಿನಿಂದ ಹೇಳುತ್ತಿದ್ದೇನೆ.

(ಗೊಂದಲ)

ಪ್ರೊ : ಎಂ.ಡಿ. ನಂಜುಂಡಸ್ವಾಮಿ :— ಇದು ಒಂದು ಕಾರಣ.

ಶ್ರೀ ಆರ್.ಎನ್. ನಾಯಕ್ :— ನಾನು ಒಂದು ಸಜೆಶನನ್ನು ಕೊಡುತ್ತೇನೆ. ಒಳ್ಳೆ ಒಳ್ಳೆಯ ಜನರು ಬಂದಾಗ ಅವರು ಮುಂದಿನ ಸಲ ಯಾವಾಗಲಾದರೂ ಬಂದು ಬಿಡುವುದು ಒಳ್ಳೆಯದು ಇಲ್ಲಿಗೆ. ಏಕೆಂದರೆ ಈ ರೀತಿಯ ಜನರು ಇದ್ದಾಗ ತಮಗೆ ತೊಂದರೆಯಾಗುತ್ತದೆ. ಆದ್ದರಿಂದ ನಿಮ್ಮ ಯೋಗ್ಯತೆಗೆ ತಕ್ಕಂಥ ಜನರು ಇಲ್ಲಿ ಕುಳಿತಾಗ ತಾವು ಮತ್ತೊಮ್ಮೆ ಬಂದುಬಿಡುವುದು ಒಳ್ಳೆಯದು. ಈಗಿನ ಗತಿ ವಿಚಾರ ಮಾಡಿ. ಈಗ ಏನು ತೊಂದರೆಯಾಗಿದೆ ತಮಗೆ, ಅದಕ್ಕೆ ಪರಿಹಾರ ತಮ್ಮ ಹತ್ತಿರ ಇದೆ.

ಶ್ರೀ ವಾಟಾಳ್ ನಾಗರಾಜ್ :— ಇದು ಕಣ್ಣೀರನ್ನು ಆರಿಸಿಕೊಂಡು ಕುಡಿಯತಕ್ಕಂಥ ವ್ಯವಸ್ಥೆ ಇದು.

ಶ್ರೀ ಡಿ.ಎ. ಚಿನ್ನಪ್ಪ :— ಮಾನ್ಯ ಅಧ್ಯಕ್ಷರೇ ಮಾನ್ಯ ಪ್ರೊ : ನಂಜುಂಡಸ್ವಾಮಿಯವರು ಏನು ಹೇಳಿದ್ದಾರೆ ಏನೆಂದರೆ 9ನೇ ವಿಧಾನ ಸಭೆಗೆ ಬಂದಿದ್ದು ಬಹಳ ದೊಡ್ಡ ತಪ್ಪಾಯಿತು ಅಂತ ಹೇಳುತ್ತಾರೆ. ಆದ್ದರಿಂದ ಈ 9ನೇ ವಿಧಾನ ಸಭೆಯಲ್ಲಿರತಕ್ಕ 225 ಮಾನ್ಯ ಸದಸ್ಯರುಗಳು ಅವರಿಗಿಂತ ಕೀಳುಮಟ್ಟದವರು ಅವರು ಇಲ್ಲಿ ಬರಲಿಕ್ಕೆ ಯೋಗ್ಯತೆ ಇಲ್ಲ ಅನ್ನತಕ್ಕ ಭಾವನೆಯನ್ನು ಅವರು ಸೂಚಿಸಿದ್ದಾರೆ. ಇದು ಹಕ್ಕುಚ್ಯುತಿ ಎಂದು ನಾನು ಅವರ ಮೇಲೆ ಅಪಾದನೆಯನ್ನು ಮಾಡುತ್ತೇನೆ. That 's what he has told. That is the intention.

ಅಧ್ಯಕ್ಷರು :— ಬರೆದುಕಳುಹಿಸಿ.

ಶ್ರೀ ಡಿ.ಎ. ಚಿನ್ನಪ್ಪ :— ಅಧ್ಯಕ್ಷರೇ The way you have spoken here, directly hits the feeling of the members.

ಪ್ರೊ:ಎಂ. ಡಿ. ನಂಜುಂಡಸ್ವಾಮಿ :— ನಾನು ಹೇಳುವರೆಗೂ ಏತಕ್ಕೆ ಅವಸರ ಪಡುತ್ತೀರಿ?

ಶ್ರೀ ಡಿ. ಎ. ಚಿನ್ನಪ್ಪ :— ಅವಸರ ಪಡುವುದಿಲ್ಲ.

ಶ್ರೀ ಆರ್. ದಯಾನಂದರಾವ್ :— ಈ ಭೂ ಲೋಕಕ್ಕೆ ಅವರು ಚಂದ್ರಲೋಕದಿಂದ ಬಂದಿದ್ದಾರೆ. ಆದ್ದರಿಂದ ಅವರಿಗೆ ಗೊತ್ತಾಗುತ್ತಿಲ್ಲ.

ಶ್ರೀ ಆರ್.ಎನ್. ನಾಯಕ್:— ಪರಿಹಾರ ತಮ್ಮ ಹತ್ತಿರನೇ ಇದೆ. ಒಂದು ನಿಮಿಷದ ಕೆಲಸ. ತಮ್ಮ ಹತ್ತಿರನೇ ಪರಿಹಾರ ಇದೆ. ಪರಿಹಾರವನ್ನು ತಾವೇ ಕಂಡುಕೊಳ್ಳಿ. ತಾವು ದೊಡ್ಡವರು ಬಂದಿದ್ದರಿ ಅಂತ ನಾವು ಆಚೆಗೆ ಹೋಗುವುದಕ್ಕೆ ಆಗುತ್ತದಾ? ನಾವು ಎದ್ದು ಆಚೆಗೆ ಹೋಗುವುದಕ್ಕೂ ಆಗುವುದಿಲ್ಲ.

Sri D.A. Chinappa:– We are thinking that you are a highly matured man and a very learned man.

PROF. M.D. NANJUNDASWAMY :– Then why are you trying to tell one as immatured? I have not yet completed.

ನಾನು ಇನ್ನೂ ಒಂದು ವಾಕ್ಯವನ್ನು ಪ್ರಾರಂಭ ಮಾಡುತ್ತಿದ್ದೇನೆ.

ಶ್ರೀ ಡಿ.ಎ. ಚಿನ್ನಪ್ಪ :— ನಿಮ್ಮ ಭಾಷೆಯ ಮೊದಲನೆಯ ಶಬ್ದವೇ ಹಾಗೆ ಹೊರಟಿತು.

ಅಧ್ಯಕ್ಷರು :— ಮಾನ್ಯ ಚಿನ್ನಪ್ಪನವರು ಅವರು ಹೇಳಲಿ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :— ಒಂದು ವಾಕ್ಯವನ್ನು ಮಾತನಾಡಿದ್ದೇನೆ.

ಅಧ್ಯಕ್ಷರು :— ಪ್ರೊ : ಎನ್.ಜಿ. ನಾಯಕ್‌ರವರಿಗೆ ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಎಸ್.ಜಿ. ನಾಯಕ್:— ಮಾನ್ಯ ನಂಜುಂಡಸ್ವಾಮಿಯವರು ಈ ಸದನಕ್ಕೆ ನಾನು ಏತಕ್ಕೆ ಆರಿಸಿ ಬಂದೆ ಅಂತ ಹೇಳಿದರು. ಬೇಕಾದರೆ ಕೇಳಿಕೊಂಡು ಬರಲಿ ಅಂತ ನಾನು ಹೇಳುತ್ತಿದ್ದೇನೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :— ನಾನು ಇನ್ನು ಒಂದೇ ಒಂದು ವಾಕ್ಯವನ್ನು ಹೇಳಿದ್ದೇನೆ. ಏಕೆ ಈ 9ನೇ ವಿಧಾನಸಭೆಗೆ ಆಯ್ಕೆಯಾಗಿ ಬಂದೆ ಅನ್ನುವುದನ್ನು ನನಗೆ ಬೇಕಾಗಿರುವುದರಿಂದ ಹೇಳಿದೆ. ಆದರಿಂದ ನನ್ನ ಇಲ್ಲಿರುವಂಥ ಗೌರವಾನ್ವಿತ 225 ಮಾನ್ಯ ಸದಸ್ಯರ ಬಗ್ಗೆ ಬೇಜಾರಾಗಿದೆ. ಅಂತ ಅಲ್ಲ, ಈ ಸರ್ಕಾರದ ಬಗ್ಗೆ ಬೇಜಾರಾಗಿದೆ. ತಮಗೆ ಗೊತ್ತಿದೆ ನಾವು ಒಂದುವಾರದ ಕೆಳಗೆ ಬಂದು ನಿಮ್ಮ ಸರ್ಕಾರವನ್ನು ನೋಡಿ ಮೆಚ್ಚಿದ್ದು. ಈಗ ನ್ಯಾಯಾಲಯ ನಿಮ್ಮನ್ನು ನೋಡಿ ನಗುತ್ತಾ ಇದೆ. ನೀವು ಮಾಡುವಂತಹ ಅವಿವೇಕಿತನಕ್ಕೆ ನಾವು ತಲೆಯನ್ನು ಭಾಗಿಸುವಹಾಗೆ ಮಾಡತ್ತೀರಿ, ಇದನ್ನು ಬಹಳ ಉದಾಸೀನವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ.

SRI. M.Veerappa Moily :– He cannot tell like that. He cannot just say like that to the Government. What is that ಅವಿವೇಕಿತನ he should tell that.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :— ಅವಿವೇಕತನ ಅಂದರೆ . . . .

ಶ್ರೀ ಬಸವರಾಜ ರಾಯರೆಡ್ಡಿ :— ಅವಿವೇಕಿ ಅಂದರೆ ವಿವೇಕ ಇಲ್ಲದವರು ಅಂತ.

ಗೊಂದಲ

ಪ್ರೊ: ಎಂ.ಡಿ. ನಂಜುಂಡಸ್ವಾಮಿ :— ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ನಾನು ಇನ್ನು ಎರಡೂವರೆ ವರ್ಷ ಇಲ್ಲಿ ಏನು ಮಾಡಬೇಕು ಅಂತ ಗೊತ್ತಾಗುತ್ತಿಲ್ಲ.

ಶ್ರೀ ಎಂ.ನಾರಾಯಣಸ್ವಾಮಿ :— ಪ್ರೊ :ರವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಸುಮ್ಮನೆ ಅಡೆತಡೆಯಾಗುತ್ತಿದ್ದರೆ ತೊಂದರೆಯಾಗುತ್ತದೆ. ಅವರ ಅನಿಸಿಕೆಗಳನ್ನು ಇಡುತ್ತಿದ್ದಾರೆ. ತಾವು ತಾಳ್ಮೆಯಿಂದ ಕೇಳಿ. ಆಮೇಲೆ ತಾವು ಹೇಳಬಹುದು. ತಮಗೂ ಅವಕಾಶ ಇದೆ ಮಾತನಾಡಿ.

ಶ್ರೀ ಆರ್. ದಯಾನಂದರಾಜ್ :—ಎರಡೂವರೆ ವರ್ಷ ತಪ್ಪಸ್ಸು ಮಾಡಿದರೆ ಒಳ್ಳೆಯದು.

ಶ್ರೀ ಎಂ. ನಾರಾಯಣಸ್ವಾಮಿ :— ತಪ್ಪಸ್ಸು ಮಾಡುವುದು ಯಾರು ಅನ್ನುವುದು ಗೊತ್ತಾಗುತ್ತದೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :— ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳುವಂತಹ ವಿಚಾರ ಅಲ್ಲವೇ ಅಲ್ಲ. ಏಕೆಂದರೆ ಉಚ್ಛನ್ಯಾಯಾಲಯದ ಮೇಲೆ ಮುಖ್ಯಮಂತ್ರಿಗಳು ಬಹಳ ಉದ್ದ ಉದ್ದ ಭಾಷಣವನ್ನು ಮಾಡಿದರು. ಅದು ದಾಖಲೆಗೆ ಹೋಗಿದೆ. The main culprit is the Chief Minister.

SRI R. DAYANANDA RAO :– You should withdraw it. You cannot say that. If the Hon'ble Speaker tells me I will withdraw it. ಇದು ಹುಡುಗಾಟದ ವಿಚಾರ ಅಲ್ಲ. ಯಾರೋ ಅಧಿಕಾರ ಕೊಟ್ಟ ಅಂತ, ಅವನು ಕೊಟ್ಟಿದ್ದನ್ನು ಕಣ್ಣುಮುಚ್ಚಿಕೊಂಡು ಹೇಳುವಂತಹ ಮಂತ್ರಿಗಳು ಇದ್ದರೆ ಅವರನ್ನು ಮಂತ್ರಿಗಳು ಎಂದು ನಾನು ಕರೆಯುವುದಿಲ್ಲ. ಸದನದದ ಘನತೆ ಗೌರವ ಒಂದು ವರ್ಷದಿಂದ ಏನಾಗುತ್ತಿದೆ. ಎನ್ನುವುದನ್ನು ನಾವು ಆಲೋಚನೆ ಮಾಡಬೇಕೇ ಅಥವಾ ಬೇಡವೇ Why should I be made to un-necessarily bow my head to the judiciary for no reason of mine.
ಯಾವ ಕಾರಣಕ್ಕಾಗಿ ನಾನು ತಲೆ ತಗ್ಗಿಸಬೇಕು? ನಿಮಗೆ ಏನಾದರೂ ಅಧಿಕಾರ ಇದೆಯಾ ನನ್ನನ್ನು ತಲೆ ತಗ್ಗಿಸುವಹಾಗೆ ಮಾಡುವುದಕ್ಕೆ? ನಿಮ್ಮ ಅವಿವೇಕಿತನದಿಂದ The first thing is he should tender his apology to the High Court and then this matter should be referred to the Privileges Committee. ಯಾರು ತಪ್ಪಿತಸ್ಥರಾಗಿದ್ದಾರೋ ಅವರು ಶಿಕ್ಷೆಯನ್ನು ಅನುಭವಿಸಲೇಬೇಕು. ಇಲ್ಲವೆಂದರೆ, ಎಲ್ಲಾ ಇಲಾಖಾಧಿಕಾರಿಗಳು ನಿಮ್ಮ ಕೈಯಿಂದ ಇದೇ ಕೆಲಸವನ್ನು ಮಾಡಿಸುತ್ತಾರೆ. ಆಗ ನಾವು ಎಲ್ಲಿಗೆ ಹೋಗುತ್ತೇವೆ? ಆ ಕಾರಣದಿಂದ ಇನ್ನು ಎರಡೂವರೆ ವರ್ಷಗಳು ನಾವು ಇಲ್ಲಿ ಬಂದು ಏನು ಮಾಡಬೇಕು ಅಂತ ಹೇಳಿದ್ದು ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಇಷ್ಟವಿರಲಿಲ್ಲ. ನಾನು ಈ ಹಕ್ಕುಚ್ಯುತಿ ಸೂಚನಾ ಪತ್ರಕ್ಕೆ ರುಜು ಹಾಕಿದ ಕಾರಣದಿಂದ ಮಾತನಾಡಿದೆ ಅಷ್ಟೆ

ಶ್ರೀ ಆರ್. ದಯಾನಂದರಾವ್ :— ಮಾನ್ಯ ಅಧ್ಯಕ್ಷರೇ, ಈಗ ಹೈಕೋರ್ಟ್ ಬಗ್ಗೆ ಅವರು ಕಳುಹಿಸಿಲ್ಲವೆಂದು, ಸರ್ಕಾರವನ್ನು ಅವಿವೇಕತನವೆಂದರೆ It won't come in any way .
ಇಲ್ಲಿ ಮಾನ್ಯ ಸಂಸದೀಯ ಮಂತ್ರಿಗಳಿದ್ದಾರೆ. ಅವರು ಉತ್ತರ ಕೊಡುತ್ತಾರೆ. We have to wait for sometime. We cannot just embark on the High Court all of a sudden. We cannot take any action now. That's what I wanted to tell.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏನೋ ಉತ್ತರವನ್ನು ಕೊಡುತ್ತೇವೆಂದು ಹೇಳುತ್ತಿದ್ದರು. ನಿಮ್ಮ ಸರ್ಕಾರ ಮಾಡಿರುವ ತಪ್ಪನ್ನು ಮುಚ್ಚಿಕೊಳ್ಳುವಂಥ ಒಂದು ಪ್ರಯತ್ನದಲ್ಲಿ ಮತ್ತೆ ನಮಗೂ ನ್ಯಾಯಾಂಗಕ್ಕೂ ದಯವಿಟ್ಟು ಸಂಬಂಧ ಕೆಡಿಸಬೇಡಿ. ಏಕೆಂದರೆ, ಇವೊತ್ತಿನ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಸುದ್ದಿ ಏನಿದೆಯೆಂದರೆ, I know that the present Chief Justice has interfered in this matter and asked the Registrar to make the statement. The present Chief Justice is totally a different man than the previous Chief Justice Mr. Jain. I know all of them.

ಆ ಕಾರಣದಿಂದ ದಯವಿಟ್ಟು ನೀವು ನಿಮ್ಮ ತಪ್ಪನ್ನು ಮುಚ್ಚಿಕೊಳ್ಳುವಂಥ ಒಂದು ಉತ್ಸಾಹದಲ್ಲಿ ಮತ್ತೇ ನಮ್ಮ ಸಂಬಂಧವನ್ನು ಕೆಡಿಸಬೇಡಿ.

+ ಶ್ರೀ ಎಂ. ವೀರಪ್ಪ ಮೊಯಿಲಿ : (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :— ಸನ್ಮಾನ್ಯ ಅಧ್ಯಕ್ಷರೆ. ಮಾನ್ಯ ಪ್ರೊ: ಎಂ.ಡಿ. ನಂಜುಂಡ ಸ್ವಾಮಿಯವರು ನಮಗೆ ಎಚ್ಚರಿಕೆ ಕೊಟ್ಟಿದ್ದಕ್ಕಾಗಿ ಅವರಿಗೆ ವಿಶೇಷ ಕೃತಜ್ಞತೆ ಮತ್ತು ವಂದನೆಗಳು. ಸರ್ಕಾರದ ಇತಿ—ಮಿತಿಗಳನ್ನು ಕೂಡ ತಾವು ಹೇಳಿದ್ದೀರಿ. ಅದಕ್ಕೆ ಒಪ್ಪುತ್ತೇನೆ. ಆದರೆ, ದಯಮಾಡಿ ನಡವಳಿಕೆಗಳ ಒಂದು ಪ್ರತಿಯನ್ನು ನಮಗೂ ಹಾಗೂ ಸದನದ ಸನ್ಮಾನ್ಯ ಎಲ್ಲಾ ಸದಸ್ಯರುಗಳಿಗೂ ಒದಗಿಸಿದರೆ ಬಹಳ ಒಳ್ಳೆಯದು. ಏಕೆಂದರೆ, ಅಲ್ಲಿ ಭಾವೋದ್ರೇಕ ಅಥವಾ ಉಚ್ಚ ನ್ಯಾಯಾಲಯದ ದಿಸೆಯಲ್ಲಿ ಸಂಘರ್ಷಣೆ ಮಾಡಿದ್ದು ಸರ್ಕಾರದಿಂದ ಬಂದಿದೆಯೋ? ಅಥವಾ ಬೇರೆ ಯಾವ ಕಡೆಯಿಂದ ಬಂದಿದೆ ಎಂಬುದನ್ನು ದಯಮಾಡಿ ಪರಾಂಬರಿಸಬೇಕು.

ಶ್ರೀ ಪಾಟೀಲ್ ನಾಗರಾಜ್ : ಇದಕ್ಕೆ ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯಿಲಿ : ಕಾರಣ ಏನೂ ಇಲ್ಲ.

ಸಭಾಧ್ಯಕ್ಷರು : ಶ್ರೀ ಪಾಟೀಲ್ ನಾಗರಾಜ್‌ರವರೆ, ತಾವು ಮಾತನಾಡುವಾಗ ಸನ್ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಮಧ್ಯೆ ಮಾತನಾಡಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಮಾತನಾಡಲಿಲ್ಲ, ಬಹಳ ಸಾವಧಾನವಾಗಿ ಕೇಳಿದ್ದೇನೆ. ದಯಮಾಡಿ ನನ್ನ ಮಾತನ್ನು ಕೇಳಬೇಕು. ಈಗ ಅದು ಸರ್ಕಾರದಿಂದ ಏನಾದರೂ ಅಪ್ಪಿತಪ್ಪಿ ಉದ್ರೇಕ ಬರತಕ್ಕಂಥಾದ್ದು, ಉಚ್ಚ ನ್ಯಾಯಾಲಯದ ಬಗ್ಗೆ ಸಂಘರ್ಷಣೆ ಮಾತನ್ನಾಡುವ ಕಾಲಕ್ಕೆ ಎದ್ದು ಎದ್ದು ನಿಂತು ನೀವು ಮಾತನಾಡುತ್ತಿರುವಾಗ ನಾವು ಈ ವಿಚಾರವನ್ನು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಹತ್ತಿರ ತೆಗೆದುಕೊಳ್ಳುತ್ತೇವೆ, ವ್ಯವಹರಿಸುತ್ತೇವೆ. ಇದರ ಬಗ್ಗೆ ಸಮಾಧಾನವಾಗಿರಬೇಕು. ಪುನ: ನಾವು ವ್ಯವಹರಿಸುತ್ತೇವೆಂದು ಹೇಳಿದ್ದೇವೆ. It is on record. But they are not happy with the answer. None of them were. . .
ಅನೇಕ ಸದಸ್ಯರಿಗೆ ಈ ಬಗ್ಗೆ ತೃಪ್ತಿ ಇರಲಿಲ್ಲ.
You must resort to your right. The provocation was from the other end. The provocation was from the other end to the Government. But, even then, the Government was not provoked.

(INTERRUPTIONS)

SRI M. VEERAPPA MOILY :– I am on my legs. I think the Treasury Bench is also entitled for protection.

MR. SPEAKER :– Yes. You have my total protection

Sri M. Veerappa moily : the provocation was from the other end. They wanted to provoke the Government to give a reply in a way to bring conflict between the Executive and the Judiciary. But we have restrained. ದಯಮಾಡಿ ತಾವು ಪರಾಂಬರಿಸಬೇಕು. ತಾವು ಸ್ವಲ್ಪ ಸಮಾಧಾನವಾಗಿ ಕೇಳಬೇಕು ಇದರ ಬಗ್ಗೆ ಹೆಚ್ಚು ವಿವರವಾಗಿ ಮಾತನಾಡುವ ಮೊದಲು ಒಂದು ವಿಚಾರವನ್ನು ಗಮನಿಸಬೇಕು. ಸರ್ಕಾರೀ ಬಗ್ಗೆ ಏನು ಒಂದು ಹೈಕೋರ್ಟಿನಿಂದ ಈ ಸದನಕ್ಕೆ ಕೊಡತಕ್ಕಂಥ ಮಾಹಿತಿಗಳ ಬಗ್ಗೆ ಕೇಳಿದೆ, ಇದೇನೂ ಹೊಸದಲ್ಲ. 1990ರ ಜೂನ್‌ನಲ್ಲಿ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ತಮ್ಮ ಪ್ರಶ್ನೆ ಸಂಖ್ಯೆ 537 ಕ್ಕೆ ಒಂದು ಮಾಹಿತಿಯನ್ನು ಕೇಳಿದ್ದರು. ಆ ಮಾಹಿತಿಗೆ ಉತ್ತರ ಕೊಡುವುದಕ್ಕೆ ನಾವು ಉಚ್ಚ ನ್ಯಾಯಾಲಯದ ಜೊತೆಯಲ್ಲಿ ವ್ಯವಹರಿಸಿದ್ದೇವೆ. ಆ ಪ್ರಶ್ನೆಗೆ ಉತ್ತರ ಕೊಡುವುದಕ್ಕಾಗಲಿಲ್ಲವೆಂದು ಆ ಸಂದರ್ಭದಲ್ಲಿ ಕೂಡ ನಮಗೆ ಬಂದಿದೆ. ಅನಂತರ ದಿನಾಂಕ 31.7.1990 ರಂದು ಶ್ರೀ ರಾಜುಗೌಡರು ತಮ್ಮ ಪ್ರಶ್ನೆ ಸಂಖ್ಯೆ 528ರಲ್ಲಿ ಪುನ: ಕೇಳಿದ್ದರು. ಆವಾಗಲೂ ಕೂಡ ಒಂದು ಸಾಲಿನ ಉತ್ತರವನ್ನು ಕಳಿಸಿದ್ದಾರೆ. ಆ ಉತ್ತರದಲ್ಲಿ ಕೂಡ

